# ಕರ್ನಾಟಕ ಶಾಸ್ತ್ರೀಯ ಸಂಗೀತ

## ಪ್ರಥಮ ವರ್ಷದ ಪಿ.ಯು.ಸಿ. ವಿದ್ಯಾರ್ಥಿಗಳಿಗಾಗಿ

**2015 - 2016**


**ಪದವಿ ಪೂರ್ವ ಶಿಕ್ಷಣ ಇಲಾಖೆ**

**ಮಲ್ಲೇಶ್ವರಂ, ಬೆಂಗಳೂರು**

© *Department of Pre-University Education* 2014-2015.

*Revised Edition - 2017*

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

*Printed on 80 GSM Maplitho paper*

## ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಹಿ/-**
**ಸಿ.ಶಿಖಾ,** ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ಪಠ್ಯಪುಸ್ತಕ ರಚನಾ ಸಮಿತಿ

ಪ್ರೊ|| ಬಿ. ವಿ. ವಿಜಯಲಕ್ಷ್ಮಿ – ಅಧ್ಯಕ್ಷರು –
ಪ್ರಾಧ್ಯಾಪಕರು, ಸಂಗೀತ ವಿಭಾಗ, ಎ.ಪಿ.ಎಸ್. ಕಲೆ ಮತ್ತು ವಿಜ್ಞಾನ ಕಾಲೇಜು.

ಪ್ರೊ|| ಟಿ. ಎಸ್. ರಮಾ, ಸದಸ್ಯರು
ಪ್ರಾಧ್ಯಾಪಕರು, ಸಂಗೀತ ವಿಭಾಗ, ಜೈನ್ ವಿಶ್ವವಿದ್ಯಾಲಯ

ಡಾ|| ಜಿ. ಹೆಚ್.ರಾಜಲಕ್ಷ್ಮಿ – ಸಂಚಾಲಕರು
ಉಪನ್ಯಾಸಕರು, ಸಂಗೀತ ವಿಭಾಗ,
ಎ.ಪಿ.ಎಸ್. ಪದವಿ ಪೂರ್ವ ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು.

ಆಧಾರ ಗ್ರಂಥಗಳು

ಕರ್ನಾಟಕ ಸಂಗೀತ ದರ್ಪಣ – ಗಾನಕಲಾ ಭೂಷಣ ಡಾ||ಟಿ.ಶಚೀದೇವಿ ಮತ್ತು
ಕರ್ನಾಟಕ ಕಲಾ ಶ್ರೀ ಟಿ.ಶಾರದ
(ನಿವೃತ್ತ ಸಂಗೀತ ಪ್ರಾಧ್ಯಾಪಕಿಯರು), ಮಹಾರಾಣಿ ಮಹಿಳಾ ಕಲಾ ಕಾಲೇಜು
ಸಂಗೀತ ಶಾಸ್ತ್ರ ಚಂದ್ರಿಕೆ – ಎಲ್.ರಾಜಾರಾವ್
ಕರ್ನಾಟಕ ಪಾರಿಭಾಷಿಕ ಶಬ್ಧಕೋಶ – ಎನ್.ಎಸ್.ಸಂಪತ್‌ಕುಮಾರಾಚಾರ್ಯ
ಸಂಗೀತ ಲಕ್ಷಣ ಸಂಗ್ರಹ – ಪದ್ಮಾ ಮೂರ್ತಿ

# ಅಧ್ಯಕ್ಷರ ನುಡಿ

ಪದವಿ ಪೂರ್ವ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳಿಗಾಗಿ ಸಂಬಂಧ ಪಟ್ಟ ವಿಷಯಗಳಲ್ಲಿ ಪಠ್ಯಪುಸ್ತಕ ಪ್ರಕಟಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಕೇವಲ ವಿಜ್ಞಾನ, ಕಲೆ, ವಾಣಿಜ್ಯ ವಿಷಯಗಳಲ್ಲದೇ, ಐಚ್ಛಿಕ ವಿಷಯವಾಗಿರುವ ಕರ್ನಾಟಕ ಸಂಗೀತಕ್ಕೂ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ಲಕ್ಷ್ಯ ಲಕ್ಷಣಗಳೆರಡೂ ಸಹ ಈ ಹೊತ್ತಿಗೆಯಲ್ಲಿದ್ದು, ಪ್ರಾರಂಭಿಕ ಹಂತದ ವಿದ್ಯಾರ್ಥಿಗಳಿಗೆ ಕಲಿಯಲು ಇದೊಂದು ಸದವಕಾಶವಾಗಿದೆ.

ವಿದ್ಯಾರ್ಥಿಗಳ ಮಟ್ಟವನ್ನು ಗಮನದಲ್ಲಿಟ್ಟು, ಸಮಿತಿಯ ಸದಸ್ಯರು ಪಠ್ಯವಸ್ತುವನ್ನು ಚರ್ಚಿಸಿ, ಪಠ್ಯ ಸಾಮಗ್ರಿಯನ್ನು ತಯಾರಿಸಿದ್ದಾರೆ. ಸಾಹಿತ್ಯವಿರುವ ಸಂಗೀತ ರಚನೆಗಳಿಗೆ ಅರ್ಥವನ್ನು ಕೊಡಲಾಗಿದೆ. ಲಕ್ಷ್ಯ ಭಾಗದಲ್ಲಿ ಎಲ್ಲ ವರ್ಗದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಸಂಗೀತ ರಚನೆಗಳನ್ನು ಆಯ್ಕೆ ಮಾಡಿಕೊಡಲಾಗಿದೆ. ಎಲ್ಲಾ ವಾಗ್ಗೇಯಕಾರರನ್ನು, ರಾಗಲಕ್ಷಣದಲ್ಲಿ ಸೂಚಿಸಿರುವ ರಾಗಗಳನ್ನು ಲಕ್ಷಣದಲ್ಲಿ ತಿಳಿಸಿರುವ ತಾಳಗಳನ್ನು ಗಮನಿಸಲಾಗಿದೆ. ವಿದ್ಯಾರ್ಥಿಗಳ ಜ್ಞಾನವೃದ್ಧಿಗೆ ಸಹಾಯವಾಗಲೆಂದು ಕೆಲವು ರಾಗಗಳಲ್ಲಿ ಅಧಿಕ ರಚನೆಗಳನ್ನು ನೀಡಲಾಗಿದೆ.

ಪ್ರಪ್ರಥಮವಾಗಿ ಈ ಪುಸ್ತಕವನ್ನು ಬರೆಯಲು ಆದೇಶ ನೀಡಿ, ಪ್ರೋತ್ಸಾಹಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯವರಿಗೆ ನಾನು ಆಭಾರಿಯಾಗಿದ್ದೇನೆ. ಈ ಪುಸ್ತಕವನ್ನು ಸಿದ್ಧಪಡಿಸಲು ಕೆಲವು ಗ್ರಂಥಗಳ ಹಾಗು ಹಿರಿಯರ ಸಲಹೆ ಸೂಚನೆಗಳನ್ನು ಪಡೆದಿರುತ್ತೇನೆ. ಅವರೆಲ್ಲರಿಗೂ ನಾನು ಚಿರಋಣಿ.

ಈ ಗ್ರಂಥ ಬರೆಯಲು ನನ್ನೊಡನೆ ಪ್ರೊ॥ಟಿ.ಎಸ್.ರಮಾ ಹಾಗೂ ಡಾ॥ಜಿ.ಹೆಚ್.ರಾಜಲಕ್ಷ್ಮಿ ಯವರುಗಳಿದ್ದು ಸಹಾಯ ಹಸ್ತನೀಡಿ ಈ ಕೈಂಕರ್ಯವನ್ನು ಯಶಸ್ವಿಗೊಳಿಸಿದ್ದಾರೆ. ಅವರಿಗೂ ಕೂಡ ನನ್ನ ಕೃತಜ್ಞತೆಗಳು. ಈ ಕಾರ್ಯದಲ್ಲಿ ಪ್ರತ್ಯಕ್ಷ ಹಾಗು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಮ್ಮ ಸಮಿತಿಯ ಪರವಾಗಿ ಅನಂತಾನಂತ ಧನ್ಯವಾದಗಳು.

**ಪ್ರೊ॥ ಬಿ. ವಿ. ವಿಜಯಲಕ್ಷ್ಮಿ**

ಅಧ್ಯಕ್ಷರು

# ವಿಷಯ ಸೂಚಿ

## ಸಂಗೀತದ ಲಕ್ಷಣ – ಶಾಸ್ತ್ರ ವಿಭಾಗ ಮತ್ತು ಪ್ರಾಯೋಗಿಕ ವಿಭಾಗಗಳು


1. ಕಲೆಯ ಇತಿಹಾಸದ ಪರಿಚಯ –

    ಅ. ಲಲಿತಕಲೆಗಳಲ್ಲಿ ಸಂಗೀತದ ಸ್ಥಾನ ,

    ಆ. ಭಾರತೀಯ ಸಂಗೀತ ಪದ್ಧತಿಗಳು – ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ.

    ಇ. ಈ ಎರಡು ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸ

    ಈ. ಕರ್ನಾಟಕ ಶಾಸ್ತ್ರೀಯ ಸಂಗೀತದ ವೈಶಿಷ್ಟ್ಯ

2. ಸಂಗೀತದ ಪಾರಿಭಾಷಿಕ ಶಬ್ದಗಳ ಸಂಕ್ಷೇಪ ವಿವರಣೆ

    ಅ. ಸಂಗೀತ, ಸ್ವರ, ಪ್ರಕೃತಿ ಮತ್ತು ವಿಕೃತಿ ಸ್ವರಗಳು, ಆರೋಹಣ ಮತ್ತು ಅವರೋಹಣ

    ಆ. ರಾಗ – ಜನಕ ಮತ್ತು ಜನ್ಯ ರಾಗಗಳು – ಉಪಾಂಗ ಮತ್ತು ಭಾಷಾಂಗ ರಾಗಗಳು

    ಇ. ಸ್ಥಾಯಿ – ಮಂದ್ರ , ಮಧ್ಯ, ಮತ್ತು ತಾರಸ್ಥಾಯಿಗಳು,

3. ತಾಳ

    ಅ. ಆವರ್ತ, ಅಕ್ಷರಕಾಲ

    ಆ. ಸುಳಾದಿ ಸಪ್ತ ತಾಳಗಳು ಅದರ ಅಂಗ, ಜಾತಿ ಮತ್ತು ಸಂಜ್ಞೆ

    ಇ. ಪ್ರಥಮ, ದ್ವಿತೀಯ ಮತ್ತು ತೃತೀಯ ಕಾಲಗಳ ಪರಿಚಯ

4. ರಾಗ – ರಾಗ ಲಕ್ಷಣಗಳು – ಪ್ರಾಯೋಗಿಕ ವಿಭಾಗದಲ್ಲಿ ಬಳಸಿರುವ ರಾಗಗಳು

    ಅ. ಮಾಯಾಮಾಳವ ಗೌಳ

    ಆ. ಮೋಹನ

    ಇ. ಹಂಸಧ್ವನಿ

    ಈ. ಖರಹರಪ್ರಿಯ

    ಉ. ನಾಗಸ್ವರಾವಳಿ

5. ಸಂಗೀತ ರಚನೆಗಳ ಲಕ್ಷಣ

    ಅ. ಸಂಚಾರಿ ಗೀತೆ

    ಆ. ಜತಿಸ್ವರ

    ಇ. ತಾನವರ್ಣ

    ಈ. ಕೃತಿ

6. ವಾಗ್ಗೇಯಕಾರರ ಜೀವನ ಚರಿತ್ರೆಗಳು ಮತ್ತು ಅವರ ಕೊಡುಗೆ

    ಅ. ಪುರಂದರ ದಾಸರು

    ಆ. ತ್ಯಾಗರಾಜರು

    ಇ. ಮುತ್ತುಸ್ವಾಮಿ ದೀಕ್ಷಿತರು

    ಈ. ಮೈಸೂರು ವಾಸುದೇವಾಚಾರ್ಯರು

    ಉ. ಬಸವಣ್ಣ

7. ಆರೋಹಣ, ಅವರೋಹಣ ಮತ್ತು ಅಂಕಿತಗಳನ್ನು ಹಾಡಿದಾಗ ರಾಗ ಮತ್ತು ರಚನೆಯನ್ನು ಗುರುತಿಸುವ ಸಾಮರ್ಥ್ಯ

## ವಿಷಯಸೂಚಿ

# ಪ್ರಾಯೋಗಿಕ ವಿಭಾಗ


**ಸ್ವರಾವಳಿಗಳು :**

1. ಸರಳೆ ವರಸೆ – 7

2. ತಾರಸ್ಥಾಯಿ ವರಸೆ – 3

3. ಮಂದ್ರಸ್ಥಾಯಿ ವರಸೆ – 3

4. ದಾಟು ವರಸೆ – 3

5. ಜಂಟಿ ವರಸೆ – 5

6. ಅಲಂಕಾರಗಳು – 7

7. ಪಿಳ್ಳಾರಿ ಗೀತೆಗಳು – 4

(ಮೇಲಿನ ಎಲ್ಲಾ ಸ್ವರಾವಳಿಗಳು ಹಾಗು ಪಿಳ್ಳಾರಿ ಗೀತೆಗಳ ರಚನಕಾರರು – ಶ್ರೀ ಪುರಂದರ ದಾಸರು)

ಅ. ಶ್ರೀ ಗಣನಾಥ – ಮಲಹರಿ – ರೂಪಕ ತಾಳ

ಆ. ಕುಂದಗೌರ – ಮಲಹರಿ – ರೂಪಕ ತಾಳ

ಇ. ಕೆರೆಯ ನೀರನು – ಮಲಹರಿ – ತ್ರಿಪುಟ ತಾಳ

ಈ. ಪದುಮನಾಭ – ಮಲಹರಿ – ತ್ರಿಪುಟ ತಾಳ

8.ಸಂಚಾರಿ ಗೀತೆಗಳು – 4

ಅ. ವರವೀಣಾ – ಮೋಹನ – ರೂಪಕ ತಾಳ

ಆ. ಮಂದರೋದ್ಧಾರೆ – ಕಾಂಭೋಜಿ – ಆದಿತಾಳ

ಇ. ಕಮಲಜಾದಳ – ಕಲ್ಯಾಣಿ – ತ್ರಿಪುಟ ತಾಳ

ಈ.ಕಮಲಸುಲೋಚನ – ಆನಂದಭೈರವಿ – ಆದಿತಾಳ

9. ಜತಿಸ್ವರ – 2

ಅ. ಹಂಸಧ್ವನಿ – ರೂಪಕ ತಾಳ

ಆ. ಕನ್ನಡ – ಆದಿ ತಾಳ

10. ತಾನವರ್ಣ – 1

ಸಾಮಿ ನಿನ್ನೆ ಕೋರಿ – ಧೀರ ಶಂಕರಾಭರಣ – ವಿಳಂಬ ಆದಿತಾಳ

11. ಮಧ್ಯಮ ಕಾಲದ ಕೃತಿಗಳು

ಅ. ರಾಮನಿನ್ನು – ಮೋಹನ – ಆದಿ ತಾಳ – ತ್ಯಾಗರಾಜರು

ಆ. ಗಂ ಗಣಪತೆ – ಹಂಸಧ್ವನಿ – ರೂಪಕ ತಾಳ – ಮುತ್ತಯ್ಯ ಭಾಗವತರು

ಇ. ಶ್ರೀವಿದ್ಯಾ – ಮಾಯಾಮಾಳವಗೌಳ – ರೂಪಕ ತಾಳ – ಮುತ್ತಯ್ಯ ಭಾಗವತರು

ಈ. ಪಾರ್ಥಸಾರಥಿ–ಮಧ್ಯಮಾವತಿ– ರೂಪಕ ತಾಳ – ರಾಮನಾಡ ಶ್ರೀನಿವಾಸ ಅಯ್ಯಂಗಾರ್

ಉ. ಪಾಹಿರಾಮ – ಖರಹರಪ್ರಿಯ – ರೂಪಕ ತಾಳ – ತ್ಯಾಗರಾಜರು

ಊ. ಗರುಡಗಮನ – ನಾಗಸ್ವರಾವಳಿ – ರೂಪಕ ತಾಳ – ಪಟ್ಟಣಂ ಸುಬ್ರಹ್ಮಣ್ಯ ಅಯ್ಯರ್

ಋ ಮಾಯಾತೀತ – ಮಾಯಾಮಾಳವಗೌಳ – ರೂಪಕ ತಾಳ – ತಂಜಾವೂರು ಪೊನ್ನಯ್ಯ

ಎ. ಹಿಮಾದ್ರಿಸುತೆ – ಕಲ್ಯಾಣಿ – ರೂಪಕ – ಶ್ಯಾಮಶಾಸ್ತ್ರಿಗಳು

12. ವಿಳಂಬ ಕಾಲದ ಕೃತಿ

ಅ. ಸಾರಸ ಸುವದನ – ಕಲ್ಯಾಣಿ – ವಿಳಂಬ ಆದಿತಾಳ – ಸ್ವಾತಿ ತಿರುನಾಳರು

# ಅಧ್ಯಾಯ 1

**ಕಲೆ :–**

ಮಾನವನು ತನ್ನ ಜೀವನದಲ್ಲಿ ನಡದ ಘಟನೆಗಳಿಂದ ಪ್ರೇರಿತನಾಗಿ ತನ್ನ ಅನುಭವಗಳಿಗೆ ಒಂದು ರೂಪವನ್ನು ಕೊಡಬಯಸುವಾಗ ಹೊರಹೊಮ್ಮುವ ಭಾವನೆಗಳೇ ಕಲೆ. ಸಾಮಾನ್ಯನು ತನ್ನಲ್ಲುಂಟಾಗುವ ವಿವಿಧ ಭಾವನೆಗಳನ್ನು ಭಾಷೆಯ ಮೂಲಕ ವ್ಯಕ್ತ ಪಡಿಸುವಂತೆ, ಕಲಾವಿದನು ಕಲೆಯ ಮೂಲಕ ತನ್ನಲ್ಲುಂಟಾಗುವ ಭಾವನೆಗಳನ್ನು ವ್ಯಕ್ತ ಪಡಿಸುತ್ತಾನೆ. ಸೌಂದರ್ಯೋಪಾಸನೆಯೇ ಕಲೆಯ  ಮುಖ್ಯ ಗುರಿ. ದೇಶ ಭಾಷೆಗಳ ಬೇಧಭಾವವಿಲ್ಲದೆ, ಎಲ್ಲರ ಹೃದಯವನ್ನು ತಣಿಸಿ, ಆನಂದ ಪಡಿಸುವುದೇ ಕಲೆಯ  ಮುಖ್ಯ ಉದ್ದೇಶ. ಆದ್ದರಿಂದ ಸ್ಥೂಲವಾಗಿ ಕಲೆಗಳನ್ನು ಲಲಿತಕಲೆ, ವಿಜ್ಞಾನಕಲೆ, ಕುಶಲಕಲೆ ಮತ್ತು ವಾಣಿಜ್ಯ ಕಲೆಗಳೆಂದು ವಿಂಗಡಿಸಬಹುದು .ಮಾನವನ ಸಂಸ್ಕಾರ ಮತ್ತು ಪ್ರತಿಭೆಯ ಮೂಲಕ ರೂಪುಗೊಳ್ಳುವುದೇ ಲಲಿತ ಕಲೆ.ಅವು ಸಂಗೀತ, ನೃತ್ಯ, ಸಾಹಿತ್ಯ, ನಾಟಕ, ಚಿತ್ರ, ಶಿಲ್ಪ ಇವೇ ಮುಂತಾದವು. ಲಲಿತ ಕಲೆಗಳು ಮಾನವನ ಇಂದ್ರಿಯಗಳ ಮೂಲಕ ಹೃದಯವನ್ನು ಸೇರಿ, ಆನಂದದಲ್ಲಿ ಪರಿಸಮಾಪ್ತಿಗೊಳ್ಳುತ್ತದೆ.

**<u>ಲಲಿತ ಕಲೆಗಳಲ್ಲಿ ಸಂಗೀತದ ಸ್ಥಾನ</u>**

ನಾದರೂಪಿಯಾಗಿ ಅಂತರ್ಗತ ಸಂಗೀತವನ್ನು ಕಿವಿಯ ಮೂಲಕ ಪಸರಿಸಿ, ಮನವನ್ನು ತಣಿಸುವುದೇ ಸಂಗೀತ. ಸಂಗೀತವು  ಭಾವದ  ಭಾಷೆ.

ಪರಬ್ರಹ್ಮನಲ್ಲಿ  ಲೀನವಾಗುವ ಈ ಕಲೆಯು ನಿತ್ಯ ನೂತನ. ಸಂಗೀತವನ್ನು ಗಾಂಧರ್ವ ವಿದ್ಯೆಯೆಂದೂ ಸಂಗೀತ ಕಲೆಯೆಂದೂ ಕರೆದಿದ್ದಾರೆ. ಆದುದರಿಂದಲೇ ಶಾಸ್ತ್ರದ ಚೌಕಟ್ಟಿಗೆ ಒಳ ಪಟ್ಟು, ಹೃದ್ಗತವಾದ ಭಾವನೆಗಳನ್ನು ವ್ಯಕ್ತಪಡಿಸಿ ನೆಮ್ಮದಿಯನ್ನು ಕೊಡುವಂತಹ ಲಲಿತ ಕಲೆಗಳಲ್ಲಿ ಸಂಗೀತವು ಅತ್ಯುತ್ತಮವೆನಿಸಿದೆ. ಸಂಗೀತವು ಮನೋರಂಜನೆಯ ಮಾಧ್ಯಮವೂ ಆಗಿದೆ.

# ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸ

ಕರ್ನಾಟಕ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ಮೂಲವು ಒಂದೇ ಆದರೂ ಅನುಸರಿಸುವ ಮಾರ್ಗದಲ್ಲಿ ವ್ಯತ್ಯಾಸಗಳಿವೆ.

ಸಾಮ್ಯ :–

1. ಎರಡು ಪದ್ಧತಿಗಳಿಗೂ ಸಪ್ತಸ್ವರಗಳೇ ಆಧಾರ.
2. ಸ್ವರಗಳ ಸಂಕೇತವೂ ಒಂದೇ ಆಗಿದೆ.
3. ಪ್ರಕೃತಿ ಮತ್ತು ವಿಕೃತಿ ಸ್ವರಗಳ ಪ್ರಭೇದಗಳೂ ಒಂದೇ ಆಗಿದ್ದು, ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರ ಸ್ಥಾನಗಳಿವೆ.
4. ಶ್ರುತಿಗೆ ತಂಬೂರಿಯೇ ಆಧಾರ.
5. ಮೂರು ಸ್ಥಾಯಿಗಳಿವೆ.
6. ಪಿಟೀಲು ಮತ್ತು ಹಾರ್ಮೋನಿಯಮ್ ವಾದ್ಯಗಳು ಪ್ರಧಾನ ಮತ್ತು ಪಕ್ಕವಾದ್ಯಗಳಾಗಿ ಬಳಕೆಯಲ್ಲಿವೆ.
7. ಮನೋಧರ್ಮ ಹಾಗೂ ರಚಿತ ಸಂಗೀತಗಳು, ಗಾಯನ ಮತ್ತು ವಾದನ ಕಛೇರಿಗಳು ಎರಡು ಪದ್ಧತಿಗಳಲ್ಲೂ ಬಳಕೆಯಲ್ಲಿವೆ.

| ಕರ್ನಾಟಕ ಸಂಗೀತ | ಹಿಂದೂಸ್ಥಾನಿ ಸಂಗೀತ |
|---|---|
| 1. ರಾಗ ವಿಭಜನೆಯಲ್ಲಿ ಜನಕ, ಜನ್ಯ ಪದ್ಧತಿಯನ್ನು ಅನುಸರಿಸುತ್ತದೆ. | 1. ರಾಗ ರಾಗಿಣಿ ಪದ್ಧತಿಯಿದ್ದು, ಇತ್ತೀಚೆಗೆ ಥಾಟ್ ಪದ್ಧತಿಯನ್ನು ರಾಗ ವಿಭಜನೆಗೆ ಅಳವಡಿಸಲಾಗಿದೆ. |
| 2. ವಿಕೃತಿ ಸ್ವರಗಳಿಗೆ ಶುದ್ಧ, ಚತುಶ್ರುತಿ, ಷಟ್‌ಶ್ರುತಿ ಎಂಬ ಹೆಸರುಗಳನ್ನು ಕೊಡಲಾಗಿದೆ. ಈ ಪದ್ಧತಿಯಲ್ಲಿ 16 ಸ್ವರಗಳಿವೆ. | 2. ಕೋಮಲ, ತೀವ್ರವೆಂಬ ಹೆಸರುಗಳನ್ನು ವಿಕೃತಿ ಸ್ವರಗಳಿಗೆ ಕೊಡಲಾಗಿದೆ. ಈ ಪದ್ಧತಿಯಲ್ಲಿ ಕೇವಲ 12 ಸ್ವರಗಳಿವ |
| 3. ರಾಗಗಳ ಸ್ವರೂಪದಲ್ಲಿ ಸಾಮ್ಯತೆಯಿದ್ದರೂ, ಹೆಸರುಗಳು ಭಿನ್ನವಾಗಿದೆ. ಕ್ರಮವಾಗಿ ಮೋಹನ, ಹಿಂದೋಳ, ಶಂಕರಾಭರಣ, ಮಾಯಾಮಾಳವಗೌಳ, ಚಕ್ರವಾಕ ಮುಂತಾದವು. | 3. ರಾಗಗಳ ಸ್ವರೂಪದಲ್ಲಿ ಸಾಮ್ಯತೆಯಿದ್ದರೂ, ಹೆಸರುಗಳು ಭಿನ್ನವಾಗಿವೆ. ಇವುಗಳನ್ನು ಕ್ರಮವಾಗಿ ಭೂಪ್, ಮಾಲ್‌ಕೌನ್ಸ್, ಬಿಲಾವಲ್, ಭೈರವ್, ಆಹಿರ್‌ಭೈರವ್ ರಾಗ ಎಂದು ಕರೆಯಲಾಗಿದೆ. |
| 4. ತಾಳಗಳಲ್ಲಿ ಸುಳಾದಿ ಸಪ್ತ ತಾಳಗಳು, ಛಾಪು ತಾಳಗಳು ಹೆಚ್ಚು ಬಳಕೆಯಲ್ಲಿವೆ. | 4. ತಾಳಗಳಲ್ಲಿ ತ್ರಿತಾಲ್, ಚೌತಾಲ್, ಜಪ್, ಸೂಲ್, ಏಕ್, ದಾದ್ರಾ ಇವೇ ಮುಂತಾದ ತಾಳಗಳು ಬಳಕೆಯಲ್ಲಿವೆ. |
| 5. ಗೀತೆ, ಜತಿಸ್ವರ, ಸ್ವರಜತಿ,ವರ್ಣ, ಕೃತಿ, ಕೀರ್ತನೆ, ಪದ, ಜಾವಳಿ, ತಿಲ್ಲಾನಗಳು ಸಂಗೀತ ರಚನೆಗಳಿಗೆ ಕೊಟ್ಟಿರುವ ಹೆಸರುಗಳು. | 5. ದ್ರುಪದ್, ಧಮಾರ್, ಖ್ಯಾಲ್, ತರಾನ, ಟಪ್ಪಾ, ಠುಮ್ರಿ, ಘಜಲ್, ಇತ್ತೀಚೆಗೆ ಲಕ್ಷಣ ಗೀತೆಗಳು. ಇವು ಸಂಗೀತ ರಚನೆಗಳಿಗೆ ಕೊಟ್ಟಿರುವ ಹೆಸರುಗಳು. |
| 6. ವಾದ್ಯಗಳಲ್ಲಿ ವೀಣೆ, ಗೋಟುವಾದ್ಯ, ನಾಗಸ್ವರ, ಕೊಳಲು, ಕ್ಲಾರಿಯೋನೆಟ್, ಡೋಲು, ಡೋಲಕ್, ಮೃದಂಗ, ಕಂಜಿರ, ಘಟ, ಮೋರ್ಚಿಂಗ್ ಮುಂತಾದವು. | 6. ಸಿತಾರ್, ಸರೋದ್, ಬಿನ್, ದಿಲ್ರೂಬ, ಸಾರಂಗಿ, ಸಂತೂರ್, ಬಾನ್ಸುರಿ, ಷಹನಾಯಿ, ತಬಲ, ಪಕವಾಜ್, ಇವೇ ಮುಂತಾದವು. |

## ಕರ್ನಾಟಕ ಸಂಗೀತದ ವೈಶಿಷ್ಟ್ಯ :–

ಕರ್ನಾಟಕ ಸಂಸ್ಥಾನವನ್ನು ಸ್ಥಾಪಿಸಲು ಸಹಾಯ ಮಾಡಿದ ಯತಿವರೇಣ್ಯರಾದ ಶ್ರೀ ವಿದ್ಯಾರಣ್ಯರೇ ಕರ್ನಾಟಕ ಸಂಗೀತ ಪದ್ಧತಿಯನ್ನು ರೂಪಿಸಿದರೆನ್ನಬಹುದು. ವಿಜಯನಗರವನ್ನಾಳಿದ ಕೃಷ್ಣದೇವರಾಯನು ಸಂಗೀತ, ಸಾಹಿತ್ಯ ಮತ್ತು ಇತರ ಲಲಿತ ಕಲೆಗಳಿಗೆ ಆಶ್ರಯದಾತನಾಗಿದ್ದನು. ಹರಿದಾಸರುಗಳೆನಿಸಿದ ಶ್ರೀ ಪಾದರಾಯರು, ವ್ಯಾಸರಾಯರು, ಪುರಂದರದಾಸರು ಮತ್ತು ತಾಳ್ಳಪಾಕಂ ಅನ್ನಮಾಚಾರ್ಯರು ಈ ಪದ್ಧತಿಯನ್ನು ರೂಪಿಸಿ ಒಂದು ಹೊಸ ಮಾರ್ಗವನ್ನು ಕಲ್ಪಿಸಿದರು. ಶ್ರೀ ಪುರಂದರ ದಾಸರು ಕರ್ನಾಟಕ ಸಂಗೀತದ ಪಿತಾಮಹರೆನಿಸಿ ಕರ್ನಾಟಕ ಸಂಗೀತದ ಅಭ್ಯಾಸ ಕ್ರಮವನ್ನು ಕ್ರಮ ಪಡಿಸಿದರು. ಕರ್ನಾಟಕ ಸಂಗೀತ ತ್ರಿಮೂರ್ತಿಗಳೆನಿಸಿದ ಶ್ರೀ ತ್ಯಾಗರಾಜರು, ಶ್ರೀ ಮುತ್ತುಸ್ವಾಮಿ ದೀಕ್ಷಿತರು, ಶ್ರೀ ಶ್ಯಾಮಶಾಸ್ತ್ರಿಗಳಿಂದ ಕರ್ನಾಟಕ ಸಂಗೀತವು

ಉನ್ನತ ಸ್ಥಾನವನ್ನು ಪಡೆಯಿತು. ಅವರ ಕಾಲವು ಚರಿತ್ರೆಯಲ್ಲಿ ಕರ್ನಾಟಕ ಸಂಗೀತದ ಸುವರ್ಣಯುಗವೆನಿಸಿ ಮೆರೆಯಿತು.

ಕರ್ನಾಟಕ ಸಂಗೀತದಲ್ಲಿ ಮನೋಧರ್ಮ ಮತ್ತು ರಚಿತ ಅಥವಾ ಕಲ್ಪಿತ ಸಂಗೀತಗಳೆಂಬ ಎರಡು ಭಾಗಗಳಿವೆ. ಗಾಯಕನ ಅಥವಾ ವಾದಕನ ಅಪೇಕ್ಷೆಯಂತೆ ಹಾಡುವುದು ಮನೋಧರ್ಮ ಸಂಗೀತ. ರಾಗಾಲಾಪನೆ, ನೆರವಲ್ ಅಂದರೆ ಸಾಹಿತ್ಯ ವಿನ್ಯಾಸ, ಕಲ್ಪನಾ ಸ್ವರಗಳು, ರಾಗ, ತಾನ, ಪಲ್ಲವಿಗಳು ಈ ವಿಭಾಗಕ್ಕೆ ಸೇರುತ್ತವೆ.

ಪೂರ್ವಭಾವಿಯಾಗಿಯೇ ರಚಿಸಲಾಗಿರುವ ರಚನೆಗಳೆಲ್ಲವೂ ರಚಿತ ಸಂಗೀತ ಅಥವಾ ಕಲ್ಪಿತ ಸಂಗೀತವೆನಿಸುತ್ತದೆ. ಸರಳೆ , ಜಂಟಿ, ಅಲಂಕಾರ, ಗೀತೆ, ಜತಿಸ್ವರ, ಸ್ವರಜತಿ, ವರ್ಣ, ಕೃತಿ, ಕೀರ್ತನೆ, ಪದ, ಜಾವಳಿ, ತಿಲ್ಲಾನಗಳು ಕರ್ನಾಟಕ ಸಂಗೀತ ಪದ್ಧತಿಯ ಸಂಗೀತ ರಚನೆಗಳು. ಇವುಗಳಲ್ಲಿ ಮುಖ್ಯವಾಗಿ ಬಳಸಿರುವ ತಾಳಗಳು ಸುಳಾದಿಸಪ್ತತಾಳಗಳು, ಆದಿ, ರೂಪಕ ಮತ್ತು ಛಾಪುತಾಳಗಳು.

ಈ ರಚನೆಗಳಲ್ಲಿ ಕೆಲವು ಸ್ವರ ಪ್ರಧಾನ ರಚನೆಗಳು. ಉಳಿದವು ಸಾಹಿತ್ಯ ಪ್ರಧಾನ ರಚನೆಗಳು. ಇವುಗಳಲ್ಲಿ ಬಳಸಿರುವ ಭಾಷೆ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳ. ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿಕೊಂಡಿರುವ ವಾದ್ಯಗಳು, ತಂತಿ ವಾದ್ಯಗಳಾದ ತಂಬೂರಿ, ವೀಣೆ, ಗೋಟುವಾದ್ಯ, ಪಿಟೀಲು. ಸುಶಿರ ವಾದ್ಯಗಳಾದ ಕೊಳಲು, ನಾದಸ್ವರ, ಕ್ಲಾರಿಯೋನೇಟ್, ತಾಳವಾದ್ಯಗಳಾದ ಮೃದಂಗ, ಡೋಲು, ಘಟ, ಕಂಜಿರ, ಢೋಲಕ್, ಮೋರ್ಚಿಂಗ್ ಮುಂತಾದವು. ಇತ್ತೀಚೆಗೆ ಬಳಸಿಕೊಂಡಿರುವ ವಾದ್ಯಗಳು ಸಾಕ್ಸೋಫೋನ್ ಮತ್ತು ಮ್ಯಾಂಡೊಲಿನ್. ಜಲ ವಾದ್ಯವಾದ ಜಲತರಂಗ್ ಸಹ ಬಳಕೆಯಲ್ಲಿದೆ.

# ಅಧ್ಯಾಯ – 2

## ಸಂಗೀತ ಶಬ್ಧಗಳ ಸಂಕ್ಷೇಪ ವಿವರಣೆ

ಸಂಗೀತ : ಸಂಗೀತವೆಂಬ ಪದಕ್ಕೆ 'ಸುಷ್ಟುಗೀತಂ ಸಂಗೀತಂ, ಸುಗೀತಂ ಸಂಗೀತಂ' ಎಂಬುದಾಗಿ ಅರ್ಥ ಮಾಡಿದ್ದಾರೆ. ಕೇಳುವುದಕ್ಕೆ ಇಂಪಾಗಿರುವ ಗೀತೆಯೇ ಸಂಗೀತ. ಕ್ರಮ ಬದ್ಧವಾಗಿದ್ದಲ್ಲಿ ಶಾಸ್ತ್ರೀಯ ಸಂಗೀತವೆನಿಸುತ್ತದೆ. ಸಂಗೀತಕ್ಕೆ ಸಪ್ತ ಸ್ವರಗಳೇ ಆಧಾರ. ಸಂಗೀತದಲ್ಲಿ ಎರಡು ವಿಧ. ಅವು ಮಾರ್ಗ ಮತ್ತು ದೇಶೀ ಸಂಗೀತ.

1. ಮಾರ್ಗ ಸಂಗೀತ– ಗಾಂಧರ್ವರಲ್ಲಿ ಬಳಕೆಯಲ್ಲಿದ್ದ, ಇತ್ತೀಚೆಗೆ ಬಳಕೆಯಲ್ಲಿಲ್ಲದ ಸಂಗೀತವನ್ನು ಮಾರ್ಗ ಸಂಗೀತವೆನ್ನುತ್ತಾರೆ. ಈ ಪದ್ಧತಿಯನ್ನು ದೇವಗಾನವೆನ್ನಲಾಗಿದೆ.
2. ದೇಶೀ ಸಂಗೀತ– ಆಯಾ ದೇಶಗಳಲ್ಲಿ ವಾಡಿಕೆಯಲ್ಲಿರುವ ಸಂಗೀತವೇ ದೇಶೀ ಸಂಗೀತ. ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳೂ ದೇಶೀ ಸಂಗೀತಕ್ಕೆ ಸೇರುತ್ತವೆ. ಈಗ ಬಳಕೆಯಲ್ಲಿರುವ ಸಂಗೀತದ ಎಲ್ಲಾ ಪ್ರಕಾರಗಳೂ ದೇಶೀ ಸಂಗೀತ.

## ಸ್ವರಗಳು

"ಸ್ವತೋ ರಂಜಯತಿ ಶ್ರೋತೃ ಚಿತ್ತಂ ಸಸ್ವರಮುಚ್ಯತೆ"

**– ಸಂಗೀತ ರತ್ನಾಕರ**

ಸ್ವತಂತ್ರವಾಗಿ ರಂಜನೆಯನ್ನುಂಟುಮಾಡಬಲ್ಲ ಧ್ವನಿಗಳೇ ಸ್ವರಗಳು. ಅವುಗಳು ಏಳು ಸ್ವರಗಳು– ಸ,ರಿ,ಗ,ಮ,ಪ,ದ,ನಿ ಎಂಬುದು ಸ್ವರಗಳಿಗೆ ನೀಡಿರುವ ಸಂಕೇತ.

ಸ – ಷಡ್ಜ
ರಿ – ರಿಷಭ
ಗ – ಗಾಂಧಾರ
ಮ – ಮಧ್ಯಮ
ಪ – ಪಂಚಮ
ದ – ಧೈವತ
ನಿ – ನಿಷಾದ

ಈ ಸಪ್ತಸ್ವರಗಳ ಮೊದಲ ಅಕ್ಷರವನ್ನು ಮುಂದಿಟ್ಟು ಈ ಸಂಕೇತವು ಹುಟ್ಟಿದೆ. ಸ್ವರಗಳಲ್ಲಿ ಎರಡು ವಿಧ. ಅವು ಪ್ರಕೃತಿ ಮತ್ತು ವಿಕೃತಿ ಸ್ವರಗಳು.

**ಪ್ರಕೃತಿ ಸ್ವರ –** ಪ್ರಕೃತಿ ಎಂದರೆ ಇದ್ದಂತೆ ಇರುವುದು ಎಂದರ್ಥ. ಯಾವುದೇ ಶೃತಿ ಭೇದಕ್ಕೂ ಒಳಪಡದೆ, ನಿರ್ದಿಷ್ಟವಾಗಿ ಇದ್ದಂತೆ ಇರುವ ಸ್ವರಗಳನ್ನು ಪ್ರಕೃತಿ ಸ್ವರವೆನ್ನುತ್ತಾರೆ. ಅವುಗಳ ಸ್ಥಾನವು ಬದಲಾವಣೆ ಯಾಗುವಂತಹುದಲ್ಲ. ಉದಾಹರಣೆಗೆ– ಷಡ್ಜ ಮತ್ತು ಪಂಚಮ.

**ವಿಕೃತಿ ಸ್ವರ –** ಶೃತಿ ಭೇದ ಹೊಂದುವ ಸ್ವರಗಳನ್ನು ವಿಕೃತಿ ಸ್ವರ ಎಂದು ಕರೆಯಲಾಗಿದೆ. ವಿಕೃತಿಯೆಂದರೆ ಭಿನ್ನ ರೂಪ ತಾಳುವುದು ಎಂದರ್ಥ. ರಿಷಭ, ಗಾಂಧಾರ, ಧೈವತ, ನಿಷಾದಗಳು ಪ್ರತ್ಯೇಕವಾಗಿ ಮೂರು ವಿಧಗಳಾಗಿವೆ. ಮಧ್ಯಮವು ಎರಡು ವಿಧವಾಗಿವೆ.

**ವಿಕೃತಿ ಸ್ವರಗಳ ಪ್ರಭೇದ :**

**ರಿಷಭದಲ್ಲಿ ಮೂರು ವಿಧ :**
1. ಶುದ್ಧ ರಿಷಭ, 2. ಚತುಶೃತಿರಿಷಭ, 3. ಷಟ್ ಶೃತಿರಿಷಭ

**ಗಾಂಧಾರದಲ್ಲಿ ಮೂರು ವಿಧ :**
1. ಶುದ್ಧ ಗಾಂಧಾರ, 2. ಸಾಧಾರಣ ಗಾಂಧಾರ 3. ಅಂತರ ಗಾಂಧಾರ

**ಮಧ್ಯಮದಲ್ಲಿ ಎರಡು ವಿಧ :**
1. ಶುದ್ಧ ಮಧ್ಯಮ 2. ಪ್ರತಿ ಮಧ್ಯಮ

**ಧೈವತದಲ್ಲಿ ಮೂರು ವಿಧ :**

1. ಶುದ್ಧ ಧೈವತ 2. ಚತುಶೃತಿ ಧೈವತ 3. ಷಟ್‌ಶೃತಿಧೈವತ

**ನಿಷಾದದಲ್ಲಿ ಮೂರು ವಿಧ :**

1. ಶುದ್ಧ ನಿಷಾದ 2. ಕೈಶಿಕಿ ನಿಷಾದ 3. ಕಾಕಲಿ ನಿಷಾದ

ಈ ಸ್ವರಗಳಲ್ಲಿ ಚತುಶೃತಿರಿಷಭ,ಶುದ್ಧ ಗಾಂಧಾರ ಸ್ವರಗಳ ಸ್ಥಾನವು ಒಂದೇ ಆಗಿದೆ. ಅಂತೆಯೇ ಒಂದೇ ಸ್ಥಾನದಲ್ಲಿ ಷಟ್‌ಶೃತಿರಿಷಭ, ಸಾಧಾರಣ ಗಾಂಧಾರಗಳು ಇವೆ. ಚತುಶೃತಿ ಧೈವತ, .ಶುದ್ಧ ನಿಷಾದ ಸ್ವರಗಳು ಮತ್ತು ಷಟ್‌ಶೃತಿಧೈವತ ಮತ್ತು ಕೈಶಿಕಿ ನಿಷಾದ ಸ್ವರಗಳು ಒಂದೇ ಸ್ಥಾನದಲ್ಲಿವೆ.

**ಆರೋಹಣ :** ಸ್ವರಗಳ ಕ್ರಮವಾದ ಏರುವಿಕೆಯನ್ನು ಆರೋಹಣವೆಂದು ಕರೆಯಲಾಗಿದೆ.
ಉದಾ : ಸ ರಿ ಗ ಮ ಪ ದ ನಿ
**ಅವರೋಹಣ :** ಸ್ವರಗಳ ಕ್ರಮವಾದ ಇಳುವಿಕೆಯನ್ನು ಅವರೋಹಣವೆಂದು ಕರೆಲಾಗುತ್ತದೆ.
ಉದಾ : ನಿ ದ ಪ ಮ ಗ ರಿ ಸ

# ಅಧ್ಯಾಯ – 2 – ರಾಗ

ಯೋಸೌಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ।
ರಂಜಕೋ ಜನ ಚಿತ್ತಾನಾಂ ಸಚರಾಗ ಉದಾಹೃತಃ॥

**– ಮತಂಗನ ಬೃಹದ್ದೇಶಿ**

ಕಿವಿಗಾನಂದವನ್ನು ಕೊಡುವ ಸ್ವರಗಳ ಗುಂಪಿಗೆ ರಾಗವೆಂದು ಹೆಸರು. ಸಂಗೀತದ ಬೆಳವಣಿಗೆಗೆ ರಾಗವೇ ಮೂಲ. ರಾಗವಿಲ್ಲದೆ ಸಂಗೀತವಿಲ್ಲ. ಯಾವುದೇ ಸಂಗೀತ ಪ್ರಕಾರವು ರೂಪುಗೊಳ್ಳುವುದಕ್ಕೂ, ವಿವಿಧ ಭಾವನೆಗಳನ್ನು ಮೂಡಿಸುವುದಕ್ಕೂ ರಾಗವೇ ಜೀವಾಳ. ಶಾಸ್ತ್ರೀಯ ಸಂಗೀತದಲ್ಲಿ ಪ್ರತಿಯೊಂದು ರಾಗದ ಸ್ವರೂಪವನ್ನು ನಿರ್ಧರಿಸಿ ಅದೇ ಕ್ರಮದಲ್ಲಿ ವಿಸ್ತರಿಸಲಾಗುತ್ತದೆ.

ರಂಜಿಸುವ ಸ್ವರಗಳ ಸಮೂಹವೇ ರಾಗ. ಸಪ್ತ ಸ್ವರಗಳ ವಿವಿಧ ರೀತಿಯ ಜೋಡಣೆಯಿಂದ ರಾಗಗಳಾಗುತ್ತದೆ. ಇಂತಹ ರಾಗಗಳ ಸಂಖ್ಯೆ ಅಪಾರ. ಭಾರತೀಯ ಸಂಗೀತ ಪ್ರಕಾರಗಳಿಗೂ ರಾಗವೇ ಆಧಾರ.

## ರಾಗಗಳ ವರ್ಗೀಕರಣ

**ರಾಗಗಳಲ್ಲಿ ಎರಡು ವಿಧ ಅವು : ಜನಕ ಮತ್ತು ಜನ್ಯ ರಾಗಗಳು.**

**ಜನಕ ರಾಗ :** ಇದನ್ನು ಮೇಳಕರ್ತ ರಾಗ, ಮೇಳ ರಾಗ, ಕರ್ತ ರಾಗ, ರಾಗಾಂಗ ರಾಗ, ಸಂಪೂರ್ಣ ರಾಗವೆಂಬುದಾಗಿಯೂ ಕರೆಯುತ್ತಾರೆ. ಸಪ್ತಸ್ವರಗಳು ಆರೋಹಣ, ಅವರೋಹಣವೆರಡರಲ್ಲೂ ಸ್ವರ ಸಂಪೂರ್ಣತೆ, ಸ್ವರಾನುಕ್ರಮತೆ, ಸ್ವರ ಸಾರೂಪ್ಯತೆಗಳನ್ನು ಹೊಂದಿದ್ದರೆ ಅಂತಹ ರಾಗಗಳನ್ನು ಜನಕ ರಾಗವೆಂದು ಕರೆಯುತ್ತಾರೆ. ಇಂತಹ ಜನಕ ರಾಗಗಳು ಎಪ್ಪತ್ತೆರಡು. ಉದಾ : ಮಾಯಾಮಾಳವಗೌಳ, ಹರಿಕಾಂಭೋಜಿ, ಕಾಮವರ್ಧಿನಿ, ಮೇಚಕಲ್ಯಾಣಿ ಇತ್ಯಾದಿ.

**ಜನ್ಯ ರಾಗ :** ಆರೋಹಣ, ಅವರೋಹಣ ಅಥವಾ ಎರಡರಲ್ಲೂ ಒಂದು ಅಥವಾ ಹೆಚ್ಚು ಸ್ವರಗಳು ವರ್ಜ್ಯವಾದ ರಾಗಗಳನ್ನು ಜನ್ಯ ರಾಗವೆನ್ನುತ್ತಾರೆ. ಇವುಗಳಲ್ಲಿ ಎರಡು ವಿಧ. ಅವು ಉಪಾಂಗ ಮತ್ತು ಭಾಷಾಂಗ ರಾಗ.

ಉಪಾಂಗ ರಾಗ : ಜನಕ ರಾಗದ ಸ್ವರಗಳನ್ನೇ ಹೊಂದಿದ್ದು, ಒಂದು ಅಥವಾ ಎರಡು ಸ್ವರಗಳು ಬಿಟ್ಟು ಹೋದಲ್ಲಿ ಅಂತಹ ರಾಗಗಳನ್ನು ಉಪಾಂಗ ರಾಗ ವೆಂದು ಕರೆಯಲಾಗುತ್ತದೆ.

ಉದಾ : ಮಲಹರಿ, ಮೋಹನ, ಹಂಸಧ್ವನಿ.

**ಭಾಷಾಂಗ ರಾಗ :** ಜನ್ಯ ರಾಗಗಳಲ್ಲಿ ಕೆಲವು ರಾಗಗಳು ಸಂಚಾರದಲ್ಲಿ ತನ್ನ ಜನಕ ರಾಗದ ಸ್ವರಗಳ ಜೊತೆಗೆ ಬೇರೆ ಜನಕ ರಾಗದ ಒಂದೋ ಅಥವಾ ಎರಡೋ ಸ್ವರಗಳನ್ನು ತನ್ನ ಭಾವಪೂರ್ಣತೆಗೋಸ್ಕರ ಹೊಂದಿರುತ್ತದೆ. ಈ ಅನ್ಯ ಸ್ವರಗಳು ಕೆಲವು ವಿಶೇಷ ಸಂಚಾರಗಳಲ್ಲಿ ಬರುತ್ತವೆ. ಈ ಅನ್ಯಸ್ವರ ಪ್ರಯೋಗದಿಂದ ರಾಗದ ಛಾಯೆಯು ಚೆನ್ನಾಗಿ ತಿಳಿಯುತ್ತದೆ.

ಉದಾ : ಬಿಲಹರಿ, ಕಾಂಭೋಜಿ, ಭೈರವಿ.

**ವಕ್ರ ರಾಗ :** ರಾಗದ ಆರೋಹಣ ಅಥವಾ ಅವರೋಹಣಗಳಲ್ಲಿ ಸ್ವರಗಳು ಹಿಂದುಮುಂದಾಗಿ ಸಂಯೋಜಿತವಾಗಿದ್ದಲ್ಲಿ ಅಂತಹ ರಾಗವನ್ನು ವಕ್ರ ರಾಗವೆನ್ನುತ್ತಾರೆ. ಉದಾ : ಶ್ರೀರಾಗ, ಕದನಕುತೂಹಲ, ರೀತಿಗೌಳ.

ರಾಗಗಳನ್ನು **ಸಂಪೂರ್ಣ, ಷಾಡವ, ಔಡವ** ಎಂಬ ಪ್ರಭೇದಗಳ ಮೂಲಕ ವಿವರಿಸಲಾಗುವುದು.

**ಸಂಪೂರ್ಣ :** ಆರೋಹಣ ಅಥವಾ ಅವರೋಹಣದಲ್ಲಿ ಏಳು ಸ್ವರಗಳಿದ್ದಲ್ಲಿ ಅದು ಸಂಪೂರ್ಣ.

**ಷಾಡವ :** ಆರೋಹಣ ಅಥವಾ ಅವರೋಹಣದಲ್ಲಿ ಆರು ಸ್ವರಗಳಿದ್ದರೆ ಅದು ಷಾಡವ.

**ಔಡವ :** ಆರೋಹಣ ಅಥವಾ ಅವರೋಹಣದಲ್ಲಿ ಐದು ಸ್ವರಗಳಿದ್ದರೆ ಅದು ಔಡವ.

**ಸ್ವರಾಂತರ :** ಆರೋಹಣ ಅಥವಾ ಅವರೋಹಣದಲ್ಲಿ ನಾಲ್ಕು ಸ್ವರವಿದ್ದಲ್ಲಿ ಅದು ಸ್ವರಾಂತರ.

**ಸ್ಥಾಯಿ :** ಆರೋಹಣ ಮತ್ತು ಅವರೋಹಣಕ್ಕೆ ಸುಲಭವಾಗಿ ಹೊಂದಿ ಬರುವ ಸಪ್ತಸ್ವರ ಸಮೂಹಕ್ಕೆ ಸ್ಥಾಯಿಯೆಂದು ಹೆಸರು. ನಾದವು ಒಂದೇ ರೀತಿಯಾಗಿರದೆ ತಗ್ಗಾದ ಮತ್ತು ತೀವ್ರವಾದ ಧ್ವನಿಗಳಿಂದ ಕೂಡಿರುತ್ತದೆ.

**ಮಂದ್ರ ಸ್ಥಾಯಿ :** ಆಧಾರ ಷಡ್ಜದಿಂದ ಅವರೋಹಣ ಕ್ರಮದಲ್ಲಿ ಬರುವ, ಅಂದರೆ ನಿಷಾದದಿಂದ ಮೊದಲುಗೊಂಡು ಕೆಳಗಿನ ಷಡ್ಜದವರೆಗೆ ಬರುವ ಸ್ವರಗಳನ್ನು ಮಂದ್ರ ಸ್ಥಾಯಿಯೆನ್ನಲಾಗಿದೆ. **ಉದಾ : ನಿ ದ ಪ ಮ ಗ ರಿ ಸ.** ಬರವಣಿಗೆಯಲ್ಲಿ ಈ ಸ್ವರಗಳ ಕೆಳಗೆ ಚುಕ್ಕೆಗಳನ್ನು ಇಡಲಾಗುತ್ತದೆ.

**ಮಧ್ಯ ಸ್ಥಾಯಿ :** ಆಧಾರ ಷಡ್ಜದಿಂದ ಆರೋಹಣ ಕ್ರಮದಲ್ಲಿ ಮುಂದಿನ ನಿಷಾದದವರೆಗೂ ಬರುವ ಸ್ವರಗಳಿಗೆ ಮಧ್ಯಸ್ಥಾಯಿಯೆಂದು ಹೆಸರು. **ಉದಾ : ಸ಼ ರಿ಼ ಗ಼ ಮ಼ ಪ಼ ದ಼ ನಿ಼.** ಬರವಣಿಗೆಯಲ್ಲಿ ಈ ಸ್ವರಗಳ ಕೆಳಗೆ ಚುಕ್ಕೆಗಳನ್ನು ಇಡಲಾಗುವುದಿಲ್ಲ.

**ತಾರಸ್ಥಾಯಿ :** ಮಧ್ಯಸ್ಥಾಯಿಯ ನಿಷಾದದ ನಂತರ ಬರುವ ಷಡ್ಜದಿಂದ ಮುಂದಕ್ಕೆ ಆರೋಹಣ ಕ್ರಮದಲ್ಲಿ ಬರುವ ಸ್ವರಗಳೇ ತಾರಸ್ಥಾಯಿ ಎನಿಸಿಕೊಳ್ಳುತ್ತದೆ. ಬರವಣಿಗೆಯಲ್ಲಿ ತಾರಸ್ಥಾಯಿಯನ್ನು ತೋರಿಸಲು ಸ್ವರಗಳ ಮೇಲೆ ಚುಕ್ಕೆಗಳನ್ನು ಇಡಲಾಗುತ್ತದೆ **ಉದಾ : ಸ̇ ರಿ̇ ಗ̇ ಮ̇ ಪ̇ ದ̇ ನಿ̇.**

# ಅಧ್ಯಾಯ – 3 ತಾಳ

ತಕಾರಸ್ತಾಂಡವ ಪ್ರೋಕ್ತಂ ಲಕಾರೋ ಲಾಸ್ಯ ಮುಚ್ಯತೇ।
ಶಿವೇನ ತಾಂಡವಂ ಪ್ರೋಕ್ತಂ ಲಾಸ್ಯಂತು ಗಿರಿಕನ್ಯಯಾ।
ತಾಂಡವೋ ಲಾಸ್ಯ ಸಂಯೋಗಾತ್ತಾಳ ನಾಮಾಭಿಧೀಯತೇ॥

ತಕಾರವು ತಾಂಡವದ ರೂಪ. ಲಕಾರವು ಲಾಸ್ಯದ ರೂಪ. ಶಿವನು ತಾಂಡವದ ಪ್ರವರ್ತಕ. ಗಿರಿಜೆಯು ಲಾಸ್ಯದ ಪ್ರವರ್ತಕಿ. ಶಿವಶಕ್ತಿಯರ ಸಮಾಗಮವೇ ತಾಳದ ಮೂಲ.

ಸಂಗೀತ ರಚನೆಗಳನ್ನು ಹಾಡಲು ಅನುಸರಿಸುವ ವೇಗವನ್ನು ನಿರ್ಣಯ ಮಾಡುವ ಕ್ರಿಯೆಗೆ ತಾಳವೆಂದು ಹೆಸರು. ತಾಳವನ್ನು ಹಸ್ತದ ಘಾತ ಮತ್ತು ಬೆರಳುಗಳ ಎಣಿಕೆಗಳಿಂದ ತೋರಿಸಲಾಗುತ್ತದೆ. ಸಂಗೀತವನ್ನು, ಕ್ರಮವಾದ ಎಣಿಕೆಗೆ ಮತ್ತು ಗಣಿತ ಶಾಸ್ತ್ರಕ್ಕೆ ಸಂಬಂಧಿಸಿರುವಂತೆ ಮಾಡಿರುವುದೇ ತಾಳ.

**ಗೀತಂ ವಾದ್ಯಂ ತಥಾ ನೃತ್ಯಂ ತಥಾ ಸಂಗೀತಮುಚ್ಯತೆ.**
**ಗಾಯನ, ವಾದನ ತಥಾ ನೃತ್ಯಂ ಯತಸ್ತಾಳೇ ಪ್ರತಿಷ್ಠಿತಂ॥**

ಗಾಯನ, ವಾದನ ಮತ್ತು ನೃತ್ಯ ಇವು ಮೂರಕ್ಕೂ ತಾಳವೇ ಪ್ರಧಾನವಾಗಿದೆ. ತಾಳದ ಅವಯವ ಅಥವಾ ಭಾಗಗಳನ್ನು ಅಂಗವೆಂದು ಕರೆಯುತ್ತಾರೆ.

**ತಾಳಾಂಗಗಳು :**

ತಾಳದ ಅಂಗಗಳು ಆರು.

1) ಅನುದ್ರುತ 2) ದ್ರುತ 3) ಲಘು 4) ಗುರು. 5) ಪ್ಲುತ 6) ಕಾಕಪಾದ

ಸುಳಾದಿ ಸಪ್ತತಾಳಗಳಲ್ಲಿ ಬಳಸುವ ತಾಳಾಂಗಗಳು ಮೂರು. ಅವು ಲಘು, ದ್ರುತ ಮತ್ತು ಅನುದ್ರುತ

**ಲಘು :** ಒಂದು ಘಾತವನ್ನು ಹಾಕಿ ಬೆರಳುಗಳನ್ನು ಎಣಿಸುವುದಕ್ಕೆ ಲಘುವೆಂದು ಹೆಸರು.

ಇದರ ಚಿಹ್ನೆ = ।

**ದ್ರುತ :** ಒಂದು ಘಾತವನ್ನು ಹಾಕಿ ವಿಸರ್ಜಿತವನ್ನು ಹಾಕುವುದಕ್ಕೆ ದ್ರುತವೆಂದು ಹೆಸರು.

ಇದರ ಚಿಹ್ನೆ = 0

**ಅನುದ್ರುತ :** ಒಂದು ಘಾತವನ್ನು ಮಾತ್ರ ಹಾಕುವುದಕ್ಕೆ ಅನುದ್ರುತವೆಂದು ಹೆಸರು.

ಇದರ ಚಿಹ್ನೆ = **“U”**

ಸಂಗೀತದಲ್ಲಿ ಬಳಸುವ ತಾಳಗಳು ಏಳು. ಇವುಗಳನ್ನು "ಸಪ್ತತಾಳಗಳು" ಎನ್ನುತ್ತಾರೆ. ಈ ಸಪ್ತತಾಳ ಪದ್ಧತಿಯು ಪುರಂದರ ದಾಸರ ಕಾಲದಿಂದ ಪ್ರಚಾರಕ್ಕೆ ಬಂದಿತು. ಈ ತಾಳಗಳಿಗೆ ಸುಳಾದಿ ಸಪ್ತತಾಳಗಳೆಂದು ಹೆಸರು. ಈ ಏಳು ತಾಳಗಳಲ್ಲಿ ಷಡಂಗಗಳಲ್ಲಿನ ಮೊದಲ ಮೂರು ಅಂಗಗಳಾದ ಅನುದ್ರುತ, ದ್ರುತ, ಲಘುಗಳು ಮಾತ್ರ ಇವೆ. ಈ ಸಪ್ತತಾಳಗಳಿಗೆ ಕ್ರಮವಾಗಿ ಧ್ರುವ, ಮಠ್ಯ, ರೂಪಕ, ಝುಂಪೆ, ತ್ರಿಪುಟ, ಅಟ, ಏಕ ತಾಳಗಳೆಂದು ಹೆಸರು.

ಈ ಏಳು ತಾಳಗಳನ್ನು ಐದು ಜಾತಿಗಳಲ್ಲಿ ನಡೆಸಿದಾಗ ಮೂವತ್ತೈದು ತಾಳಗಳು ಉಂಟಾಗುತ್ತದೆ. ಉದಾ : ಏಕತಾಳವನ್ನು ತೆಗೆದುಕೊಂಡರೆ, ತಿಶ್ರ ಜಾತಿ ಏಕತಾಳ, ಚತುರಶ್ರ ಜಾತಿ ಏಕತಾಳ, ಖಂಡಜಾತಿ ಏಕತಾಳ, ಮಿಶ್ರಜಾತಿ ಏಕತಾಳ, ಸಂಕೀರ್ಣಜಾತಿ ಏಕತಾಳಗಳಿರುತ್ತವೆ. ಹೀಗೆ ಏಕ ತಾಳವನ್ನು ಐದು ಜಾತಿಗಳಲ್ಲಿ ನಡೆಸಿ ಐದು ವಿಧಗಳಾದ ತಾಳಗಳನ್ನು ಹೊಂದಬಹುದು. ಹಾಗೆಯೇ ಪ್ರತಿಯೊಂದು ತಾಳದಲ್ಲೂ ಐದು ವಿಧಗಳು ಏರ್ಪಡುತ್ತವೆ. ಹೀಗೆ ಮೂವತ್ತೈದು ತಾಳಗಳಾಗಿವೆ.

**ಆವರ್ತ :** ಆಯಾ ತಾಳದ ತಾಳಾಂಗಗಳು ಒಂದಾವರ್ತಿ ಮುಗಿಯುವುದಕ್ಕೆ ಆವರ್ತವೆಂದು ಹೆಸರು. ಸಂಗೀತವನ್ನು ಸ್ವರ ಪಡಿಸಿ ಬರೆಯುವಾಗ '||' ಈ ರೀತಿಯ ನಿಲು ಗೀಟುಗಳನ್ನು ತಾಳಾವರ್ತದ ಪ್ರಾರಂಭ ಮತ್ತು ಮುಕ್ತಾಯಗಳಲ್ಲಿ ತೋರಿಸಲಾಗುವುದು.

**ಅಕ್ಷರಕಾಲ :**

ಒಂದು ಎಣಿಕೆಗೆ ಒಂದು ಸ್ವರವು ಬಂದರೆ ಅದನ್ನು ಅಕ್ಷರಕಾಲವೆಂದು ಕರೆಯಲಾಗುತ್ತದೆ. ಆದಿತಾಳದಲ್ಲಿ ಒಂದು ಆವರ್ತಕ್ಕೆ ಎಂಟು ಸ್ವರಗಳಿರುತ್ತವೆ. ಅಲಂಕಾರ, ಗೀತೆ, ಸುಳಾದಿಗಳೆಂಬ ಅಭ್ಯಾಸ ಗಾನ ರಚನೆಗಳು ಅಕ್ಷರಕಾಲದಲ್ಲಿವೆ.

# ಅಧ್ಯಾಯ – 3

## ಸುಳಾದಿ ಸಪ್ತತಾಳಗಳ ಅಂಗ, ಅಕ್ಷರ, ಚಿಹ್ನೆಗಳ ವಿವರ

| ಸಂಖ್ಯೆ | ಜಾತಿ ಮತ್ತು ತಾಳ | ಅಕ್ಷರ | ಅಂಗ | ಚಿಹ್ನೆ |
|---|---|---|---|---|
| 1. | ಚತುರಶ್ರಜಾತಿ ಧ್ರುವತಾಳ | 14 | 1ಲಘು/1ದೃತ/1ಲಘು/1ಲಘು | 1011 |
| 2. | ಚತುರಶ್ರಜಾತಿ ಮಠ್ಯತಾಳ | 10 | 1ಲಘು/1ದೃತ/1ಲಘು | 101 |
| 3. | ಚತುರಶ್ರಜಾತಿ ರೂಪಕತಾಳ | 06 | 1ದೃತ/1ಲಘು | 01 |
| 4. | ಮಿಶ್ರಜಾತಿ ಝಂಪೆತಾಳ | 10 | 1ಲಘು/1ಅನುದೃತ/1ದೃತ | 1∪0 |
| 5. | ತಿಶ್ರಜಾತಿ ತ್ರಿಪುಟತಾಳ | 07 | 1ಲಘು/1ದೃತ/1ದೃತ | 100 |
| 6. | ಖಂಡಜಾತಿ ಅಟ್ಟತಾಳ | 14 | 1ಲಘು/1ಲಘು/1ದೃತ/1ದೃತ | 1100 |
| 7. | ಚತುರಶ್ರಜಾತಿ ಏಕತಾಳ | 04 | 1ಲಘು | 01 |

**ಕಾಲ ಅಥವಾ ಲಯ**

**ಪ್ರಥಮ, ದ್ವಿತೀಯ ಮತ್ತು ತೃತೀಯ ಕಾಲಗಳ ಪರಿಚಯ :**

ಸಂಗೀತದಲ್ಲಿ (ಶ್ರುತಿರ್ಮಾತಾ ಲಯ:ಪಿತಾ) ಎಂದು ಶಾಸ್ತ್ರಕಾರರು ನುಡಿದಿರುವ ಹಾಗೆ ಶ್ರುತಿ ಸಂಗೀತದ ತಾಯಿ, ಲಯವು ಸಂಗೀತದ ತಂದೆ. ಸಂಗಿತದಲ್ಲಿ ಲಯವು ಶ್ರುತಿಯಷ್ಟೇ ಪ್ರಧಾನ್ಯತೆಯನ್ನು ಹೊಂದಿದೆ. ಲಯವು ಕೇಳುವವರಿಗೂ ಹಾಗು ಹಾಡುವವರಿಗೂ ಸ್ಫೂರ್ತಿದಾಯಕವಾಗಿದೆ.

ಸಂಗೀತ ರಚನೆಗಳನ್ನು ಹಾಡಲು ಅನುಸರಿಸುವ ವೇಗ ಅಥವಾ ಗತಿಗೆ ಲಯವೆಂದು ಹೆಸರು. ಲಯವನ್ನೇ ಕಾಲವೆಂದೂ ಕರೆಯುತ್ತಾರೆ. ಗಾಯಕನ ಅಥವಾ ವಾದಕನ ಶಕ್ತಿಗನುಸಾರವಾಗಿ ಆರು ವಿಧವಾಗಿ ವಿಂಗಡಿಸಲಾಗಿದೆ. ಆದರೆ ಸಾಮಾನ್ಯವಾಗಿ ರೂಢಿಯಲ್ಲಿರುವುದು ಮೂರು ಕಾಲಗಳು ಮಾತ್ರ.

1. **ವಿಳಂಬ ಕಾಲ**
2. **ಮಧ್ಯಮ ಕಾಲ**
3. **ದ್ರುತ ಕಾಲ**

ಸ್ವರಗಳನ್ನು ಹಾಡುವ ಕಾಲವು, ಸ್ವರಗಳ ಮೇಲೆ ಅಥವಾ ಕೆಳಗೆ ಎಳೆದಿರುವ ಗೆರೆಯಿಂದ ತಿಳಿಯುತ್ತದೆ. ಎರಡನೆಯ ಕಾಲವನ್ನು ತೋರಿಸಲು ಸ್ವರಗಳ ಮೇಲೆ ಅಥವಾ ಕೆಳಗೆ ಒಂದು ಗೆರೆಯನ್ನು ಎಳೆಯಲಾಗುತ್ತದೆ. ಮೂರನೆಯ ಕಾಲವನ್ನು ತೋರಿಸಲು ಸ್ವರಗಳ ಮೇಲೆ ಅಥವಾ ಕೆಳಗೆ ಎರಡು ಗೆರೆಗಳನ್ನು ಎಳೆಯಲಾಗುತ್ತದೆ.

| | | | | | | | | |
|---|---|---|---|---|---|---|---|---|
| **1 ಕಾಲ :** | ಸ | ರಿ | ಗ | ಮ | ಪ | ದ | ನಿ | ಸ |
| **2 ಕಾಲ :** | ಸ | ರಿ | ಗ | ಮ | ಪ | ದ | ನಿ | ಸ |
| **3 ಕಾಲ :** | ಸ | ರಿ | ಗ | ಮ | ಪ | ದ | ನಿ | ಸ |

## ಅಧ್ಯಾಯ – 4
# ರಾಗ ಲಕ್ಷಣಗಳು

1. ರಾಗ : ಮಾಯಾಮಾಳವಗೌಳ

**ಆ : ಸ ರಿ ಗ ಮ ಪ ದ ನಿ ಸ**

**ಅ : ಸ ನಿ ದ ಪ ಮ ಗ ರಿ ಸ**

15ನೇ ಮೇಳಕರ್ತ. ಜನಕರಾಗ. ಎಪ್ಪತ್ತೆರಡು ಮೇಳಕರ್ತಗಳ ರಚನೆಯಾದ ಮೇಲೆ ಮಾಳವಗೌಳವೆಂದಿದ್ದ ಹೆಸರಿಗೆ ಕಟಪಯಾದಿ ನಿಯಮಕ್ಕನುಸಾರವಾಗಿ 'ಮಾಯಾ' ಎಂಬ ಪದವನ್ನು ಸೇರಿಸಿದ್ದಾರೆ. ಇದು ಮೂರ್ಛನಕಾರಕ ಮೇಳ. ಸಂಪೂರ್ಣರಾಗ , ರಾಗಾಂಗರಾಗ.

ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಶುದ್ಧ ರಿಷಭ, ಅಂತರ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಶುದ್ಧ ಧೈವತ ಮತ್ತು ಕಾಕಲಿ ನಿಷಾದ. ಸರ್ವಸ್ವರಗಮಕವರಿಕ ರಕ್ತಿರಾಗ ರಾಗ. ತ್ರಿಸ್ಥಾಯಿ ರಾಗ. ಅನೇಕ ಜನ್ಯ ರಾಗಗಳನ್ನುಳ್ಳ ರಾಗ. ಪ್ರಾರಂಭದಲ್ಲಿ ಕಲಿಯಲು ಸುಲಭವಾಗಿರುವುದರಿಂದ, ಸ್ವರಾವಳಿಗಳು ಈ ರಾಗದಲ್ಲಿವೆ.

**ಪ್ರಸಿದ್ಧ ರಚನೆಗಳು :**

| | | | |
|---|---|---|---|
| **ಕೃತಿ** | **ತುಳಸೀದಳ** | **ರೂಪಕ** | **ತ್ಯಾಗರಾಜರು** |
| **ಕೃತಿ** | **ಶ್ರೀನಾಥಾದಿಗುರುಗುಹೊ** | **ಆದಿ** | **ಮುತ್ತುಸ್ವಾಮಿ ದೀಕ್ಷಿತರು** |
| **ಕೃತಿ** | **ಮಾಯಾತೀತ** | **ರೂಪಕ** | **ತಂಜಾವೂರು ಪೊನ್ನಯ್ಯ** |

## 2. ರಾಗ : ಮೋಹನ

**ಆ : ಸ ರಿ ಗ ಪ ದ ಸ**

**ಅ : ಸ ದ ಪ ಗ ರಿ ಸ**

ಜನ್ಯರಾಗ. 28ನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ. ಷಡ್ಜ ಮತ್ತು ಪಂಚಮಗಳೊಡನೆ, ಚತುಶ್ರುತಿ ರಿಷಭ, ಅಂತರ ಗಾಂಧಾರ, ಚತುಶ್ರುತಿ ಧೈವತ ಸ್ವರಗಳು ಈ ರಾಗಕ್ಕೆ ಬರುತ್ತದೆ. ಔಡವರಾಗ, ವರ್ಜ್ಯರಾಗ, ಮಧ್ಯಮ ಮತ್ತು ನಿಷಾದ ಸ್ವರಗಳು ವರ್ಜ್ಯ. ಉಪಾಂಗ ರಾಗ. ಜಂಟಿವರಸೆ ಪ್ರಯೋಗಗಳು, ದಾಟುಸ್ವರ ಪ್ರಯೋಗಗಳೂ ರಾಗಕ್ಕೆ ಸೌಂದರ್ಯವನ್ನು ಕೊಡುತ್ತದೆ. ಸರ್ವಸ್ವರಗಮಕವರಿಕ ರಕ್ತಿರಾಗ. ಸರ್ವಕಾಲದಲ್ಲೂ ಹಾಡಬಹುದಾದಂತಹ ರಾಗ. ಆದರೂ ರಾತ್ರಿ ವೇಳೆಯಲ್ಲಿ ಶೋಭಿಸುತ್ತದೆ. ಮಂಗಳಕರವಾದ ರಾಗ. ತ್ರಿಸ್ಥಾಯಿ ರಾಗ.

ಪ್ರಸಿದ್ಧ ರಚನೆಗಳು

| | | | |
|---|---|---|---|
| ತಾನವರ್ಣ | : | **ನಿನ್ನುಕೋರಿ** | ಆದಿ ರಾಮನಾಡ್ ಶ್ರೀನಿವಾಸಯ್ಯಂಗಾರ್ |
| ಕೃತಿ | : | **ರಾಮನಿನ್ನುನಮ್ಮಿನ** | ಆದಿ ತ್ಯಾಗರಾಜರು |
| ಕೃತಿ | : | **ರಾರಾ ರಾಜೀವ ಲೋಚನ** | ಆದಿ ಮೈಸೂರು ವಾಸುದೇವಾಚಾರ್ಯರು |

## 3. ರಾಗ : ಮೇಚಕಲ್ಯಾಣಿ

ಆ : ಸ ರಿ ಗ ಮ ಪ ದ ನಿ ಸ

ಅ : ಸ ನಿ ದ ಪ ಮ ಗ ರಿ ಸ

65ನೇ ಮೇಳಕರ್ತ. ಕಟಪಯಾದಿ ನಿಯಮವನ್ನನುಸರಿಸಿ **'ಮೇಚ'** ಎಂಬ ಪದವನ್ನು ಸೇರಿಸಲಾಗಿದೆ. ಬಹಳವಾಗಿ ರೂಢಿಯಲ್ಲಿರುವ ಪ್ರತಿ ಮಧ್ಯಮ ರಾಗ. ಸರ್ವಸ್ವರಗಮಕವರಿಕ ರಕ್ತಿರಾಗ.

ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಚತುಶ್ರುತಿ ರಿಷಭ, ಅಂತರ ಗಾಂಧಾರ, ಪ್ರತಿ ಮಧ್ಯಮ, ಪಂಚಮ, ಚತುಶ್ರುತಿ ಧೈವತ, ಕಾಕಲಿ ನಿಷಾದ. ರಾಗಾಂಗರಾಗ. ಸಂಪೂರ್ಣರಾಗ. ಹಿಂದೂಸ್ಥಾನಿ ಪದ್ಧತಿಯಲ್ಲಿ ಯಮನ್ ಎಂದು ಪ್ರಸಿದ್ಧವಾಗಿದೆ. ಅನೇಕ ಜನ್ಯರಾಗಗಳನ್ನುಳ್ಳ ರಾಗ. ವಿಶ್ವವ್ಯಾಪಿ ರಾಗ , ತ್ರಿಸ್ಥಾಯಿ ರಾಗ.

ಪ್ರಸಿದ್ಧ ರಚನೆಗಳು

| | | | |
|---|---|---|---|
| ತಾನವರ್ಣ | **ವನಜಾಕ್ಷಿ** | ಆದಿ | ತ್ಯಾಗರಾಜರು |
| ಕೃತಿ | **ನಮ್ಮಿವಚ್ಚಿನ** | ರೂಪಕ | ತ್ಯಾಗರಾಜರು |
| ಕೃತಿ | **ಸಾರಸಸುವದನ** | ಆದಿ | ಸ್ವಾತಿತಿರುನಾಳ್ |

**4. ರಾಗ : ಹಂಸಧ್ವನಿ**

ಆ : ಸ ರಿ ಗ ಪ ನಿ ಸ
ಅ : ಸ ನಿ ಪ ಗ ರಿ ಸ

ಜನ್ಯರಾಗ. 29ನೇ ಮೇಳಕರ್ತ ಧೀರಶಂಕರಾಭರಣದಲ್ಲಿ ಜನ್ಯ. ಈ ರಾಗವನ್ನು ಕಂಡುಹಿಡಿದವರು ಮುತ್ತುಸ್ವಾಮಿ ದೀಕ್ಷಿತರ ತಂದೆಯವರಾದ ರಾಮಸ್ವಾಮಿ ದೀಕ್ಷಿತರು. ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಚತುಶ್ರುತಿ ರಿಷಭ, ಅಂತರ ಗಾಂಧಾರ, ಪಂಚಮ, ಕಾಕಲಿ ನಿಷಾದ. ಇದು ವರ್ಜ್ಯ ರಾಗ. ಮಧ್ಯಮ ಮತ್ತು ಧೈವತ ಸ್ವರಗಳು ವರ್ಜ್ಯ. ಔಡವ ರಾಗ. ಉಪಾಂಗ ರಾಗ. ಸರ್ವಸ್ವರಗಮಕವರಿಕ ರಕ್ತಿರಾಗ. ವೀರರಸ ಪ್ರಧಾನವಾಗಿರುವ ರಾಗ. ಸರ್ವಕಾಲಿಕ ರಾಗ. ತ್ರಿಸ್ಥಾಯಿ ರಾಗ.

**ಪ್ರಸಿದ್ಧ ರಚನೆಗಳು**

| | | | |
|---|---|---|---|
| **ತಾನವರ್ಣ** | ಜಲಜಾಕ್ಷಿ | ಆದಿ | ಮಾನಂಬುಚಾವಡಿ ವೆಂಕಟಸುಬ್ಬಯ್ಯರ್ |
| **ತಾನವರ್ಣ** | ಪಗವಾರಿ | ಆದಿ | ಪಟ್ಣಂ ಸುಬ್ರಮಣ್ಯ ಅಯ್ಯರ್ |
| ಕೃತಿ | ವಾತಾಪಿ | ಆದಿ | ಮುತ್ತುಸ್ವಾಮಿದೀಕ್ಷಿತರು |
| ಕೃತಿ | ರಘುನಾಯಕ | ಆದಿ | ತ್ಯಾಗರಾಜರು |
| ಕೃತಿ | ಗಂಗಣಪತೇನಮೊ | ರೂಪಕ | ಮುತ್ತಯ್ಯಭಾಗವತರ್ |

**5. ರಾಗ : ಖರಹರಪ್ರಿಯ**

ಆ : ಸ ರಿ ಗ ಮ ಪ ದ ನಿ ಸ

ಅ : ಸ ನಿ ದ ಪ ಮ ಗ ರಿ ಸ

22ನೇ ಮೇಳಕರ್ತ. ರಾಗಾಂಗರಾಗ. ಸಂಪೂರ್ಣ ರಾಗ. ಅನೇಕ ಜನ್ಯರಾಗಗಳನ್ನುಳ್ಳ ರಾಗ. ಈ ರಾಗಕ್ಕೆ ಷಡ್ಜ, ಚತುಶ್ರುತಿ ರಿಷಭ, ಸಾಧಾರಣ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಚತುಶ್ರುತಿ ಧೈವತ, ಕೈಶಿಕಿ ನಿಷಾದ ಸ್ವರಗಳು ಬರುತ್ತದೆ. ತ್ಯಾಗರಾಜರು ಈ ರಾಗದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು ಈ ರಾಗದಲ್ಲಿ ರಚಿತವಾಗಿಲ್ಲ. ತ್ರಿಸ್ಥಾಯಿ ರಾಗ. ಸರ್ವಸ್ವರಗಮಕವರಿಕ ರಕ್ತಿರಾಗ.

ಪ್ರಸಿದ್ಧ ರಚನೆಗಳು

| | | | |
|---|---|---|---|
| ಕೃತಿ | **ಚಕ್ಕನಿರಾಜ** | ಆದಿ | ತ್ಯಾಗರಾಜರು |
| ಕೃತಿ | **ರಾರಾ ಎನಿಪಿಲಚಿತೆ** | ಆದಿ | ವಾಸುದೇವಚಾರ್ಯರು |
| ಕೃತಿ | **ರಾಮ ನೀಸಮಾನಮೆವರು** | ರೂಪಕ | ತ್ಯಾಗರಾಜರು |

**ನಾಗಸ್ವರಾವಳಿ :**

ಜನ್ಯರಾಗ. 28ನೇ ಮೇಳಕರ್ತ ಹರಿಕಾಂಭೋಜಿ ರಾಗದಲ್ಲಿ ಜನ್ಯ. ಉಪಾಂಗರಾಗ, ಔಡವ ರಾಗ

**ಆರೋಹಣ : ಸ ಗ ಮ ಪ ದ ಸ ॥**

**ಅವರೋಹಣ :** ಸ ದ ಪ ಮ ಗ ಸ ॥

ಬರುವ ಸ್ವರಗಳು – ಷಡ್ಜ , ಅಂತರ ಗಾಂಧಾರ, ಶುದ್ಧ ಮಧ್ಯಮ ಪಂಚಮ, ಚತುಶ್ರುತಿ ಧೈವತ

ಪ್ರಸಿದ್ಧ ರಚನೆಗಳು – ಗರುಡ ಗಮನ, ಶ್ರೀ ಶಂಕರ ಗುರುವರಂ ಇತ್ಯಾದಿ.

# ಅಧ್ಯಾಯ – 5

## ಟಿಪ್ಪಣಿಗಳು

**ಸಂಚಾರಿ ಗೀತೆ :** ರಾಗದ ಸಂಚಾರವನ್ನು ಸರಳವಾಗಿ ಹೊಂದಿರುವುದಕ್ಕೆ ಸಾದಾರಣಗೀತೆ, ಸಾಮಾನ್ಯ ಗೀತೆ, ಲಕ್ಷ್ಯಗೀತೆಯೆಂದೂ ಕರೆಯುತ್ತಾರೆ. ಆದರೆ ಮಲಹರಿ ರಾಗದಲ್ಲಿರುವ ಗೀತೆಗಳನ್ನು ಪಿಳ್ಳಾರಿ ಗೀತೆಗಳೆಂದು ಕರೆಯುವುದು ವಾಡಿಕೆಯಲ್ಲಿದೆ. ಗೀತೆಯು ರಾಗದ ಪ್ರಯೋಗಶೀಲತೆಯನ್ನು ಒಳಗೊಂಡಿರುತ್ತದೆ.

ಧಾತು ಮಾತುಗಳು ಅಂದರೆ ಸಂಗೀತ, ಸಾಹಿತ್ಯಗಳು ಸೇರಿ ಗೀತೆಯೆನಿಸುತ್ತದೆ. ಕೆಲವು ಗೀತೆಗಳಲ್ಲಿ ಭಾಗಗಳು ಇರುವುದಿಲ್ಲ. ಇನ್ನು ಕೆಲವು ಗೀತೆಗಳಲ್ಲಿ ಎರಡು ಭಾಗಗಳಿದ್ದು ಅವುಗಳನ್ನು ಅಂತರ ಮತ್ತು ಜಾವಡಿಯೆಂದು ಕರೆಯಲಾಗಿದೆ. ಗೀತೆಗಳು ಅಕ್ಷರ ಕಾಲದ ಎಣಿಕೆಯಿಂದ ಕೂಡಿ, ಸುಳಾದಿ ಸಪ್ತತಾಳದಲ್ಲಿದ್ದು ಹೆಚ್ಚು ಸಾಹಿತ್ಯಾಕ್ಷರಗಳನ್ನು ಹೊಂದಿರುತ್ತದೆ. ಕೆಲವು ಗೀತೆಗಳಲ್ಲಿ, ಅಕಾರ, ಇಕಾರಗಳು, ಅಯ್ಯ, ಇಯ್ಯ ಗಳೆಂಬ ಪದಗಳು ಬರುತ್ತದೆ. ಗೀತೆಗಳನ್ನು ರಕ್ತಿ ರಾಗಗಳಲ್ಲೂ ಘನ ರಾಗಗಳಲ್ಲೂ ರಚಿಸಲಾಗಿದ್ದು ಪುನರಾವರ್ತನೆಯಿಲ್ಲದೆ ಹಾಡಲಾಗುತ್ತದೆ. ದೇವತಾಸ್ತುತಿಯಿಂದ ಕೂಡಿರುವ ಗೀತೆಗಳು ಕನ್ನಡ, ತೆಲುಗು ಮತ್ತು ಭಾಂಡೀರ ಭಾಷೆಗಳಲ್ಲಿದ್ದು ಸರಳವಾಗಿವೆ. ಪುರಂದರ ದಾಸರು, ಪೈದಾಲ ಗುರುಮೂರ್ತಿ ಶಾಸ್ತ್ರಿ, ವೆಂಕಟಮಖಿಯವರು  ಗೀತೆಗಳ ವಾಗ್ಗೇಯಕಾರರು. ವಾಗ್ಗೇಯಕಾರರನ್ನೂ ಗುರುತಿಸಲಾಗದ ಅನೇಕ ಗೀತೆಗಳು ಕರ್ಣ ಪರಂಪರೆಯಲ್ಲಿ ಉಳಿದು ಬಂದಿವೆ.

**ಜತಿಸ್ವರ;** ಜತಿಸ್ವರವು ಸಾಹಿತ್ಯರಹಿತವಾದ ರಚನೆ. ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ಹೊಂದಿ ರಾಗದ ಪೂರ್ಣ ಸಂಚಾರಗಳನ್ನು ಭಾವಯುಕ್ತವಾಗಿ ಗಮಕಯುಕ್ತವಾಗಿ ಹೊರಗೆಡಹುವ ತಾಳಬದ್ಧವಾದ ಸಾಹಿತ್ಯಯುಕ್ತ ರಚನೆಯೇ ಜತಿಸ್ವರ. ಈ ರಚನೆಗೆ ನೃತ್ಯದಲ್ಲಿ ಪ್ರಾಧಾನ್ಯತೆ ಹೆಚ್ಚು. ಜತಿಸ್ವರಗಳು ಸಾಮಾನ್ಯವಾಗಿ ಆದಿ ಮತ್ತು ರೂಪಕ ತಾಳಗಳಲ್ಲಿದ್ದು ಮಧ್ಯ ಮತ್ತು ವಿಳಂಬ ಕಾಲಗಳಲ್ಲಿರುತ್ತದೆ. ಚರಣಗಳಲ್ಲಿ ಮಕುಟ ಸ್ವರಗಳ ಮುಕ್ತಾಯವಿರುತ್ತದೆ.

ಗಾನಕ್ರಮ : ಪಲ್ಲವಿಯನ್ನು ಎರಡಾವರ್ತಿ ಹಾಡಿ, ಪ್ರತಿಯೊಂದು ಚರಣವನ್ನು ಒಂದು ಅಥವಾ ಎರಡಾವರ್ತಿ ಹಾಡಿದ ನಂತರ ಪಲ್ಲವಿಯನ್ನು ಹಾಡಿ ಪಲ್ಲವಿಯಲ್ಲೇ ಮುಗಿಸಲಾಗುತ್ತದೆ.

**ತಾನವರ್ಣ :** ವಿವಿಧ ಜಾತಿಗಳಲ್ಲಿ ಸಂಯೋಜಿತವಾದ ಸ್ವರಗಳ್ಳುಳ್ಳ ವಿಶೇಷ ರಚನೆಗೆ ವರ್ಣವೆಂದು ಹೆಸರು. ವರ್ಣಗಳಲ್ಲಿ ರಾಗದ ರಂಜಕ ಮತ್ತು ವಿಶೇಷ ಪ್ರಯೋಗಗಳು ಕಡ್ಡಾಯವಾಗಿ ಬರುತ್ತದೆ. ಸಾಹಿತ್ಯವು ಅಲ್ಪವಾಗಿದ್ದು ಆಕಾರ, ಇಕಾರ ಮುಂತಾದವನ್ನು ಹೆಚ್ಚಾಗಿ ಹೊಂದಿದ್ದು, ವ್ಯಂಜನಾಕ್ಷರಗಳನ್ನು ಕಡಿಮೆಯಾಗಿ ಹೊಂದಿರುತ್ತದೆ.

ಸಾಹಿತ್ಯವು ಶೃಂಗಾರವಾಗಿರಬಹುದು ಅಥವಾ ಭಕ್ತಿ ಪ್ರಧಾನವಾಗಿರಬಹುದು. ಪೂರ್ವಾಂಗದ ಮತ್ತು ಉತ್ತರಾಂಗಗಳು ಪ್ರತ್ಯೇಕವಾಗಿದ್ದು, ಪೂರ್ವಾಂಗದಲ್ಲಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರಗಳನ್ನು ನಿರೂಪಿಸಿ, ನಂತರ ಪಲ್ಲವಿಯ ಒಂದು ಅವರ್ತವನ್ನು ಹಾಡಿ/ನುಡಿಸಿ ಪೂರ್ವಾಂಗವನ್ನು ಮುಗಿಸಬೇಕು. ಉತ್ತರಾಂಗದಲ್ಲಿ ಚರಣವನ್ನು ಒಂದಾವರ್ತಿ ನಿರೂಪಿಸಿ, ಎತ್ತುಗಡೆಸ್ವರಗಳನ್ನು ಹಾಡಿ/ನುಡಿಸಬೇಕು. ಪ್ರತಿಯೊಂದು ಎತ್ತುಗಡೆಸ್ವರವನ್ನು ನಿರೂಪಿಸಿದ ನಂತರ ಚರಣವನ್ನು ಎತ್ತಿಕೊಳ್ಳಬೇಕು. ಹೆಚ್ಚಾಗಿ ತಾನವರ್ಣಗಳು ಆದಿತಾಳ, ಅಟತಾಳ, ಝಂಪೆತಾಳ, ತ್ರಿಪುಟತಾಳಗಳಲ್ಲಿ ರಚಿತವಾಗಿವೆ.

**ಕೃತಿ :** ಕೃತಿಯೆಂಬುದು ಸಂಗೀತ ರಚನೆಯ ಒಂದು ಪ್ರಕಾರ. ಕೃತಿಯಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳೆಂಬ ಭಾಗಗಳಿರುತ್ತವೆ. ಕೆಲವು ಕೃತಿಗಳಲ್ಲಿ ಚಿಟ್ಟೆಸ್ವರವೆಂಬ ವಿಶೇಷ ಭಾಗವು ಇರುತ್ತದೆ. ಸಂಗೀತವೇ ಪ್ರಧಾನವಾದ ರಚನೆ. ಸಾಹಿತ್ಯವು ಭಕ್ತಿಪ್ರಧಾನವಾಗಿರುತ್ತದೆ. ಸಂಗತಿಗಳು, ಕೃತಿಗಳ ಅಂದವನ್ನು ಹೆಚ್ಚಿಸುತ್ತವೆ. ಈ ಕೃತಿಗಳಿಗೆ ಸಂಗತಿಗಳನ್ನು ರೂಢಿಗೆ ತಂದು ಹಾಗು ಎರಡು ಸಲ ಹಾಡಬೇಕೆಂಬ ನಿಯಮವನ್ನು ತಂದವರೂ ಶ್ರೀ ತ್ಯಾಗರಾಜರೇ. ವಿವಿಧ ತಾಳಗಳಲ್ಲೂ, ಸಮ ಮತ್ತು ವಿಷಮಗ್ರಹಗಳಲ್ಲೂ, ಅನೇಕ ರಾಗಗಳಲ್ಲೂ, ತೆಲುಗು, ಸಂಸ್ಕೃತ, ಕನ್ನಡ, ತಮಿಳು, ಮಲೆಯಾಳ ಭಾಷೆಗಳಲ್ಲೂ ಕೃತಿಗಳು ರಚಿತವಾಗಿವೆ. ಧಾತುಪ್ರಧಾನವಾದುದು ಕೃತಿ.

# ಅಧ್ಯಾಯ – 6

## ಪುರಂದರದಾಸರು (ಕ್ರಿ.ಶ. 1484–1564)





‘ದಾಸರೆಂದರೆ ಪುರಂದರದಾಸರಯ್ಯ’ ಎಂಬುದಾಗಿ ಗುರುಗಳಾದ ವ್ಯಾಸರಾಯರಿಂದಲೇ ಮೆಚ್ಚುಗೆ ಪಡೆದ ದಾಸ ಶ್ರೇಷ್ಠರು, ಶ್ರೀ ಪುರಂದರ ದಾಸರು. ಇವರನ್ನು ‘ಕರ್ನಾಟಕ ಸಂಗೀತ ಪಿತಾಮಹ’ರೆಂದು ಕರೆಯಲಾಗಿದೆ. ಕೋಟ್ಯಾಧೀಶರಾಗಿದ್ದು, ತಮ್ಮ ಸಂಪತ್ತೆಲ್ಲವನ್ನೂ ತ್ಯಜಿಸಿ ಭಗವದ್ಭಕ್ತರಾಗಿ ಹಾಡುತ್ತಾ ಮೋಕ್ಷ ಪಡೆದಂತಹ ಮಹನೀಯರು.

ಪುರಂದರದಾಸರ ತಂದೆ, ವರದಪ್ಪನಾಯಕ. ತಾಯಿ ಲಕ್ಷ್ಮಕ್ಕ. ಇವರದು ಚಿನಿವಾರ ವೃತ್ತಿ. ಪುಣೆಯ ಸಮೀಪದ ಪುರಂದರಗಡ ಎಂಬಲ್ಲಿ ಕ್ರಿ.ಶ. 1484ರಲ್ಲಿ ಪುರಂದರದಾಸರು ಜನಿಸಿದರು. ಅವರಿಗೆ ಶ್ರೀನಿವಾಸ ನಾಯಕನೆಂದು ಹೆಸರಿಟ್ಟರು. ತಿರುಪತಿಯ ಶ್ರೀನಿವಾಸನ ಭಕ್ತರಾದ ಇವರ ತಂದೆ ತಾಯಿಗಳು ಇವರನ್ನು ತಿಮ್ಮಪ್ಪನೆಂದು ಕರೆಯುತ್ತಿದ್ದರು. ಬಾಲ್ಯದಲ್ಲೇ ಸಂಸ್ಕೃತ, ಕನ್ನಡ, ಸಂಗೀತ, ಕಾವ್ಯ, ವ್ಯಾಕರಣ, ಪುರಾಣ, ಉಪನಿಷತ್ತುಗಳಲ್ಲಿ ಪಾರಂಗತರಾದರು. ಅವರಿಗೆ 16 ವರ್ಷ ತುಂಬುತ್ತಲೇ ಸರಸ್ವತಿ ಎಂಬ ಕನ್ಯೆಯೊಡನೆ ವಿವಾಹವಾಯಿತು. ಕೆಲವು ವರ್ಷಗಳ ನಂತರ ತಂದೆಯವರು ಗತಿಸಲು ಶ್ರೀನಿವಾಸನಾಯಕರು ಚಿನಿವಾರ ವೃತ್ತಿಯನ್ನು ಮುಂದುವರಿಸಿದರು. ಶ್ರೀಮನ್ನಾರಾಯಣನ ಸ್ಮರಣೆಯೇ ಅವರ ಜೀವನದ ಉಸಿರಾಯಿತು. ತಮ್ಮ ಗಳಿಕೆಯಿಂದ ‘ನವಕೋಟಿ ನಾರಾಯಣ’ ಎಂಬ ಬಿರುದನ್ನು ಕೃಷ್ಣದೇವರಾಯನಿಂದ ಪಡೆದರು. ನಾಯಕರ ಮಧ್ಯವಯಸ್ಸಿನಲ್ಲಿ ನಡೆದ ಘಟನೆಯಿಂದ ಅವರ ಜೀವನದ ಗತಿಯೇ ಬದಲಾಯಿತು.

ಒಮ್ಮೆ ವೃದ್ಧರೊಬ್ಬರು ತನ್ನ ಮಗನ ಮುಂಜಿಯ ಸಲುವಾಗಿ ನಾಯಕರ ಸಹಾಯವನ್ನು ಬೇಡಿದರು. ನಾಯಕರಿಂದ ಒಂದು ಕಾಸೂ ದೊರೆಯದೆ, ಅವರ ಪತ್ನಿಯಿಂದ ಮೂಗುತಿಯನ್ನು ದಾನವಾಗಿ ಪಡೆದರು. ಅದೇ ಮೂಗುತಿಯನ್ನು ನಾಯಕರಲ್ಲಿ ವಿಕ್ರಯಿಸಲು ಯತ್ನಿಸಿದರು. ಅದನ್ನು ನಾಯಕರು ತಮ್ಮಲ್ಲಿ ಭದ್ರ ಪಡಿಸಿ, ಹೆಂಡತಿಯನ್ನು ಶಿಕ್ಷಿಸಲು ಪ್ರಯತ್ನಿಸಿದಾಗ, ಅದೇ ಮೂಗುತಿಯು ವಿಷದ ಬಟ್ಟಲಲ್ಲಿ ಕಂಡುಬಂದಿತು. ನಾಯಕರಿಗೆ ಜ್ಞಾನೋದಯವಾಗಿ ಪಶ್ಚಾತಾಪದಿಂದ ತಾವು ಗಳಿಸಿದ ಸಂಪತ್ತೆಲ್ಲವನ್ನೂ ಕೃಷ್ಣಾರ್ಪಣವೆಂದು ಹೇಳಿ, ಹೆಂಡತಿ ಮಕ್ಕಳೊಂದಿಗೆ ಹರಿ ಸಂಕೀರ್ತನೆ ಮಾಡುತ್ತಾ ಸಂಚರಿಸತೊಡಗಿದರು.

ಪಂಪಾ ಕ್ಷೇತ್ರಕ್ಕೆ ಬಂದು, ಅಲ್ಲಿ ವ್ಯಾಸರಾಯರಿಂದ ಮಂತ್ರೋಪದೇಶವಾಗಿ, ಹರಿದಾಸ ದೀಕ್ಷೆಯನ್ನು ಪಡೆದರು. ಅನೇಕ ಹಾಡುಗಳನ್ನು ‘ಪುರಂದರ ವಿಠಲ’ ನೆಂಬ ಅಂಕಿತದಲ್ಲಿ ರಚಿಸಿ, ಪುರಂದರದಾಸರೆನಿಸಿದರು.

ಕೃಷ್ಣನ ಅನನ್ಯ ಭಕ್ತರಿವರು. ಭಾರತಾದ್ಯಂತ ಸಂಚರಿಸಿ, ಲಕ್ಷಗಟ್ಟಲೆ ಕೀರ್ತನೆಗಳನ್ನು ರಚಿಸಿದರು. ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ, ರಕ್ತಾಕ್ಷಿ ಸಂವತ್ಸರ, ಪುಷ್ಯ ಬಹುಳ ಅಮಾವಾಸ್ಯೆಯಂದು, ಅಂದರೆ ಕ್ರಿ.ಶ. 1564ರಲ್ಲಿ ಶ್ರೀ ಕೃಷ್ಣನಲ್ಲಿ ಲೀನರಾದರು.
ದಾಸರು ಕರ್ನಾಟಕ ಸಂಗೀತಕ್ಕೂ, ಕನ್ನಡ ಸಾಹಿತ್ಯಕ್ಕೂ ಸಲ್ಲಿಸಿರುವ ಸೇವೆ ಅಪಾರ. ಸಂಗೀತ ಪಾಠಕ್ರಮವನ್ನು ಕ್ರಮಪಡಿಸಿದರು. ಅಭ್ಯಾಸಕ್ಕೆ ಅಗತ್ಯವೆನಿಸುವ ಸ್ವರಾವಳಿ, ಅಲಂಕಾರ, ಪಿಳ್ಳಾರಿ ಗೀತೆಗಳನ್ನು ರಚಿಸಿದರು. ಮಾಯಾಮಾಳವಗೌಳ ರಾಗವನ್ನೂ, ಆದಿತಾಳವನ್ನೂ, ನಂತರ ಸುಳಾದಿ ಸಪ್ತತಾಳಗಳನ್ನೂ ಪಠ್ಯಕ್ರಮದ ಮೊದಲ ಪಾಠಗಳಲ್ಲಿ ಅಳವಡಿಸಿದರು.

ಕನ್ನಡದಲ್ಲಿ ಕೀರ್ತನೆ, ಉಗಾಭೋಗ, ಸುಳಾದಿ, ವೃತ್ತನಾಮಗಳೇ ಮೊದಲಾದ ವಿವಿಧ ರೀತಿಯ ರಚನೆಗಳನ್ನು ರಚಿಸಿದರು. ಭಾಗವತ, ಉಪನಿಷತ್ತು, ಮಹಾಭಾರತದ ಸಾರವೇ ಹಾಡುಗಳ ರೂಪದಲ್ಲಿ ಮೂಡಿಬಂದವು. ಭಕ್ತಿಯೇ ಸಂಗೀತ ರಚನೆಗಳ ಧ್ಯೇಯವಾಯಿತು. ಹೀಗೆ ಸಂಗೀತ ರಚನೆಗಳ ಮೂಲಕ ಜನಸಾಮಾನ್ಯರಿಗೆ ಗಹನ ತತ್ವಗಳ ಅರಿವನ್ನುಂಟುಮಾಡಲು ಯತ್ನಿಸಿದರು. ಗುರುಗಳಾದ ವ್ಯಾಸರಾಯರು, ಇವರ ರಚನೆಗಳ ಸಂಗ್ರಹವನ್ನು 'ಪುರಂದರೋಪನಿಷತ್' ಎಂಬುದಾಗಿ ಕರೆದು ಗೌರವಿಸಿದರು.

# ತ್ಯಾಗರಾಜರು (ಕ್ರಿ.ಶ. 1767–1847)





ಸಂಗೀತ ತ್ರಿಮೂರ್ತಿಗಳೆನಿಸಿ ಮೆರೆದ ಮೂವರು ವಾಗ್ಗೇಯಕಾರರಲ್ಲಿ ತ್ಯಾಗರಾಜರು ಒಬ್ಬರು. ಶ್ರೀ ರಾಮನ ಅನನ್ಯ ಭಕ್ತರಾಗಿದ್ದು, ಇಂದಿನ ಕರ್ನಾಟಕ ಸಂಗೀತ ಶೈಲಿಯನ್ನು ರೂಪಿಸಿದ ಪ್ರತಿಭಾವಂತ ವಾಗ್ಗೇಯಯಕಾರರು. ಗಾಯಕರು, ವೈಣಿಕರು, ಸಂಗೀತ ಶಿಕ್ಷಕರು ಹಾಗೂ ಸಾತ್ವಿಕ ಭಕ್ತಿಯ ಪ್ರತಿಪಾದಕರೆನಿಸಿದ ಮಹಾನುಭಾವಿಗಳು.

ತ್ಯಾಗರಾಜರು ರಾಮಬ್ರಹ್ಮ ಮತ್ತು ಸೀತಮ್ಮ ಎಂಬ ದಂಪತಿಗಳಿಗೆ ಕ್ರಿ.ಶ.1767 ಮೇ ತಿಂಗಳ ನಾಲ್ಕರಂದು ತಿರುವಾರೂರಿನಲ್ಲಿ (ತಂಜಾವೂರು ಜಿಲ್ಲೆ) ಜನಿಸಿದರು. ಮುರುಕುನಾಡು ಬ್ರಾಹ್ಮಣರು. ಇವರ ತಂದೆಯ ತಂದೆ ಕವಿ ಗಿರಿರಾಜ. ಷಹಾಜಿ ಮಹಾರಾಜನ ಸಂಸ್ಥಾನದ ಕವಿ. ತಾಯಿಯ ತಂದೆ ವೀಣಾಕಾಳಹಸ್ತಿ ಅಯ್ಯರ್, ತಂಜಾವೂರಿನ ಆಸ್ಥಾನ ವಿದ್ವಾಂಸರು. ತಾಯಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಂದೆಯಿಂದ ತೆಲುಗು, ಸಂಸ್ಕೃತ ಭಾಷೆಗಳನ್ನು ಕಲಿತರು. ಸೋಂಠಿ ವೆಂಕಟರಮಣಭಾಗವತರಲ್ಲಿ ಸಂಗೀತ ಶಿಕ್ಷಣ (ಕೇವಲ ಎರಡು ವರ್ಷಗಳು) ಇವುಗಳೊಡನೆ ಗಣಿತ ಜ್ಯೋತಿಷ್ಯ ಮತ್ತು ಮಂತ್ರ ಶಾಸ್ತ್ರಗಳ ಅಭ್ಯಾಸ. ತಮ್ಮ ಐದನೆಯ ವಯಸ್ಸಿನಲ್ಲೇ ರಾಮಾಯಣದ ಶ್ಲೋಕಗಳನ್ನು ಕಂಠಪಾಠ ಮಾಡಿ ಹಾಡುತ್ತಿದ್ದರು. ಕೇವಲ ತಮ್ಮ ಹತ್ತನೆಯ ವಯಸ್ಸಿನಲ್ಲೇ ಸಂಗೀತ ರಚನೆಗಳನ್ನು ರಚಿಸಿದರು. 'ನಮೋ ನಮೋ ರಾಘವಾಯ, ತವ ದಾಸೋಹಂ' ಎಂಬ ಕೀರ್ತನೆಗಳಿಂದ ಇವರ ಜೀವನವು ಆರಂಭವಾಯಿತು.

ತ್ಯಾಗರಾಜರು ಹದಿನೆಂಟನೆಯ ವಯಸ್ಸಿನಲ್ಲಿ ಗೃಹಸ್ಥ ಜೀವನವನ್ನು ಆರಂಭಿಸಿದರು. ಅವರ ಎರಡನೆಯ ಪತ್ನಿಯಲ್ಲಿ ಸೀತಾಲಕ್ಷ್ಮಿ ಎಂಬ ಮಗಳು ಜನಿಸಿದಳು. ರಾಮಕೃಷ್ಣ ಯತೀಂದ್ರರಿಂದ ರಾಮಮಂತ್ರದ ಉಪದೇಶವಾಯಿತು. ತೊಂಬತ್ತಾರು ಕೋಟಿ ರಾಮನಾಮವನ್ನು ಇಪ್ಪತ್ತೊಂದು ವರ್ಷಗಳಲ್ಲಿ ಜಪಿಸಿದರು. ಪ್ರತಿಯೊಂದು ಕೋಟಿಯನ್ನು ಮುಗಿಸಿದಾಗಲೂ ಶ್ರೀರಾಮನ ಪ್ರತ್ಯಕ್ಷನಾಗುತ್ತಿದ್ದನಂತೆ! ಹೀಗೆ ಅನೇಕ ಬಾರಿ ಶ್ರೀ ರಾಮನನ್ನು ಪ್ರತ್ಯಕ್ಷ ಮಾಡಿಕೊಂಡ ಯೋಗಿಗಳಿವರು. ತ್ಯಾಗರಾಜರದು ಸರಳ ಜೀವನ. ಪ್ರತಿ ಏಕಾದಶಿಯಂದು ಉಂಛವೃತ್ತಿಯನ್ನು ಮಾಡುತ್ತಿದ್ದರು. ರಾಜಾಶ್ರಯವನ್ನು ತ್ಯಜಿಸಿ ರಾಮನ ಸೇವೆಗೆ ಟೊಂಕ ಕಟ್ಟಿ ನಿಂತರು. ಸಂಗೀತದ ಮೂಲಕ ಮೋಕ್ಷ ಮಾರ್ಗವನ್ನು ಪಡೆಯಬಹುದೆಂದು ತೋರಿಸಿಕೊಟ್ಟ ಮಹಾತ್ಮರು. ತ್ಯಾಗರಾಜರಿಗೆ 'ಸ್ವರಾರ್ಣವ'ವೆಂಬ ಸಂಗೀತ ಶಾಸ್ತ್ರಗ್ರಂಥವನ್ನು ನಾರದ ಮಹರ್ಷಿಗಳೇ ಅನುಗ್ರಹಿಸಿದರೆಂದು ಪ್ರತೀತಿ. ತ್ಯಾಗರಾಜರು ಪ್ರತಿಭಾವಂತರು. ಉತ್ತಮ ವಾಗ್ಗೇಯಕಾರರು.

ಕವಿಯಾಗಿ, ಗೃಹಸ್ಥರಾಗಿ, ತತ್ವಜ್ಞಾನಿಯಾಗಿ, ತ್ಯಾಗಿಯಾಗಿ ತಮ್ಮ ಅಂತ್ಯಕಾಲದಲ್ಲಿ ಸನ್ಯಾಸಿಯಾಗಿ 'ನಾದಬ್ರಹ್ಮಾನಂದ' ರೆನಿಸಿದರು. ನಿಷ್ಕಾಮಕರ್ಮರೆನಿಸಿದ ನಾದಯೋಗಿಗಳಿವರು. ತಮ್ಮ ಭೌತಿಕ ಶರೀರವನ್ನು ಪುಷ್ಯ ಬಹುಳ ಪಂಚಮಿಯಂದು ಅಂದರೆ, 1847 ಜನವರಿ 6 ರಂದು ತಿರುವಯ್ಯಾರಿನಲ್ಲಿ ತ್ಯಜಿಸಿ, ನಾದಬ್ರಹ್ಮನಲ್ಲಿ ಲೀನರಾದರು. ಇಂದಿಗೂ ಈ ಪುಣ್ಯತಿಥಿಯಂದು ಆರಾಧನೆಯನ್ನು ವಿಜೃಂಭಣೆಯಿಂದ ನಡೆಸಲಾಗುತ್ತಿದೆ.

ತ್ಯಾಗರಾಜರು ಕರ್ನಾಟಕ ಸಂಗೀತಕ್ಕೆ ಸಲ್ಲಿಸಿರುವ ಸೇವೆ ಅಪಾರ. ಸಂಗೀತ ರಚನೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಕೃತಿಯನ್ನು, ಒಂದು ರೂಪಕ್ಕೆ ತಂದು, ಆ ಕೃತಿಗಳಲ್ಲಿ ಸಂಗತಿಗಳನ್ನು ರೂಢಿಸಿದರು. 72 ಮೇಳಗಳಲ್ಲಿ, ಅನೇಕ ಮೇಳಗಳಿಗೆ ರಾಗಸ್ವರೂಪವನ್ನು ಕೊಟ್ಟು ಕೃತಿಗಳನ್ನು ರಚಿಸಿದರು. ಅನೇಕ ಹೊಸ ರಾಗಗಳನ್ನು ಸೃಷ್ಟಿಸಿ, ಕೃತಿಗಳನ್ನು ರಚಿಸಿದರು. ಆದಿ, ರೂಪಕತಾಳದೊಡನೆ ಛಾಪು ತಾಳಗಳನ್ನು, ದೇಶಾದಿ ಮಧ್ಯಾದಿ ತಾಳಗಳನ್ನು ರಚನೆಗಳಲ್ಲಿ ಅಳವಡಿಸಿದರು. ದಿವ್ಯನಾಮ ಸಂಕೀರ್ತನೆ, ಉತ್ಸವ ಸಂಪ್ರದಾಯ ಕೀರ್ತನೆ, ಗೇಯನಾಟಕಗಳನ್ನು ರಚಿಸಿದರು.

ಇವರು ಅನೇಕ ಕೃತಿ ಗುಚ್ಚಗಳನ್ನೂ ರಚಿಸಿದ್ದಾರೆ. ಅವುಗಳಲ್ಲಿ ಪಂಚರತ್ನ ಕೃತಿಗಳು ಉತ್ತಮವಾದ ರಚನೆ. ಇವರ ರಚನೆಗಳು ತೆಲುಗು ಮತ್ತು ಸಂಸ್ಕೃತಭಾಷೆಗಳಲ್ಲಿವೆ. ಇವರ ಶೈಲಿಯನ್ನು ದ್ರಾಕ್ಷಾಪಾಕಕ್ಕೆ ಹೋಲಿಸಲಾಗಿದೆ. 'ತ್ಯಾಗರಾಜ' ಇವರ ಅಂಕಿತ. ಭಜನ ಸಂಪ್ರದಾಯವನ್ನು ಕ್ರಮಪಡಿಸಿದವರಿವರು. ತಮ್ಮ ಅಪಾರ ಶಿಷ್ಯಪರಂಪರೆಯಿಂದ ಅಳಿಯದ ಸಂಗೀತ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ. ಮಾನಂಬುಚಾವಡಿ ವೆಂಕಟಸುಬ್ಬಯ್ಯರ್, ವೀಣಾಕುಪ್ಪಯ್ಯರ್, ವಾಲಾಜಪೇಟೆ ವೆಂಕಟರಮಣ ಭಾಗವತರು, ಇವರ ಶಿಷ್ಯರಲ್ಲಿ ಪ್ರಮುಖರು.

# ಮುತ್ತುಸ್ವಾಮಿ ದೀಕ್ಷಿತರು (ಕ್ರಿ.ಶ. 1775–1835)





19ನೇ ಶತಮಾನವು ಸಂಗೀತದ ಸುವರ್ಣಯುಗವೆನಿಸಿದೆ. ಈ ಕಾಲದಲ್ಲೇ ಸಂಗೀತ ತ್ರಿಮೂರ್ತಿಗಳಲ್ಲೊಬ್ಬರಾದ ಮುತ್ತುಸ್ವಾಮಿ ದೀಕ್ಷಿತರ ಆಗಮನವಾಯಿತು. ಅವರ ಪಾಂಡಿತ್ಯವು ಅಪ್ರತಿಮವೆನಿಸಿ ಕರ್ನಾಟಕ ಸಂಗೀತ ಪರಂಪರೆಯನ್ನು ಅದರ ಲಕ್ಷಣವನ್ನು ಚಿರಸ್ಥಾಯಿಯಾಗಿರಿಸಲು ಅನುವಾಯಿತು.

ಇವರು ಕ್ರಿ.ಶ. 1775ರಲ್ಲಿ ತಿರುವಾರೂರಿನಲ್ಲಿ ಜನಿಸಿದ್ದರು. ಮನ್ಮಥ ಸಂವತ್ಸರ, ಫಾಲ್ಗುಣ ಮಾಸ, ಕೃತ್ತಿಕ ನಕ್ಷತ್ರ. ತಂದೆ ರಾಮಸ್ವಾಮಿ ದೀಕ್ಷಿತರು. ತಾಯಿ ಸುಬ್ಬಲಕ್ಷ್ಮಿ ಅಮ್ಮಾಳ್. ವಡಮ ಬ್ರಾಹ್ಮಣರು. ಚಿನ್ನಸ್ವಾಮಿ, ಬಾಲುಸ್ವಾಮಿ ಸಹೋದರರು. ಬಾಲಾಂಬ ಸಹೋದರಿ. ತಂದೆ ಸ್ವತಃ ವಾಗ್ಗೇಯಕಾರರು, ಸಂಗೀತ ಶಾಸ್ತ್ರಜ್ಞರು, ಗಾಯಕರು. ಹಂಸಧ್ವನಿ ರಾಗವನ್ನು ರೂಪಿಸಿದವರು. ಅಲ್ಲದೆ ವೆಂಕಟಮಖಿಯವರ ಸೋದರಮಾವನ ಮೊಮ್ಮಗ. ವೆಂಕಟವೈದ್ಯನಾಥರ ಶಿಷ್ಯರು. ಚಿದಂಬರನಾಥ ಯೋಗಿಗಳ ಆಶೀರ್ವಾದವನ್ನು ಪಡೆದವರು.

ಮುತ್ತುಸ್ವಾಮಿದೀಕ್ಷಿತರು ತಂದೆಯವರಿಂದಲೇ ಸಂಗೀತ ಶಿಕ್ಷಣವನ್ನು ಪಡೆದವರು. 16ನೆಯ ವಯಸ್ಸಿಗೆ ವೇದ, ವ್ಯಾಕರಣ, ಜ್ಯೋತಿಷ್ಯ, ಮಂತ್ರ, ತಂತ್ರಶಾಸ್ತ್ರಗಳ ಕಾವ್ಯ ನಾಟಕಾಲಂಕಾರಗಳಲ್ಲೂ, ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲೂ ಅದ್ವಿತೀಯರೆನಿಸಿದರು.

ತಂದೆ ರಾಮಸ್ವಾಮಿ ದೀಕ್ಷಿತರು ಸಂಸಾರ ಸಮೇತರಾಗಿ ಮಣಲಿಯಲ್ಲಿ ನೆಲೆಸಿದಾಗ ಪಾಶ್ಚಾತ್ಯ ಸಂಗೀತದ ಪರಿಚಯವಾಯಿತು. ಕಾಶಿಯಿಂದ ಬಂದ ಚಿದಂಬರನಾಥ ಯೋಗಿಗಳು ಮುತ್ತುಸ್ವಾಮಿಯನ್ನು ಅನುಗ್ರಹಿಸಿ ಕಾಶಿಗೆ ತಮ್ಮೊಡನೆ ಕರೆದೊಯ್ದು ಶ್ರೀ ವಿದ್ಯಾ ಮಂತ್ರೋಪದೇಶ ಮಾಡಿದರು.

ಅಲ್ಲಿ 5 ವರ್ಷದ ಕಾಲ ಜಪ ಮಾಡಿ ಸಿದ್ಧಿ ಪಡೆದರು. ನಂತರ ಅವರ ಸಿದ್ಧಿಯ ಕುರುಹಾಗಿ ಗಂಗಾ ಸ್ನಾನ ಮಾಡುವಾಗ ಕೈಗಳಿಗೆ ವೀಣೆ ದೊರೆಯಿತಂತೆ. ಈಗಲೂ ಆ ವೀಣೆಯನ್ನು ಅವರ ಪರಂಪರೆಯಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಕಾಶಿಯಿಂದ ಹಿಂತಿರುಗುವಾಗ ತಿರುತ್ತಣಿ ಕ್ಷೇತ್ರಕ್ಕೆ ಬಂದು ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಸುಬ್ರಹ್ಮಣ್ಯ ಪಂಚಾಕ್ಷರಿ ಮಂತ್ರವನ್ನು ಜಪಿಸಿದರು. ಆಗ ಸುಬ್ರಹ್ಮಣ್ಯೇಶ್ವರನು ತೇಜಸ್ವಿಯೋರ್ವನ ರೂಪದಲ್ಲಿ ಪ್ರತ್ಯಕ್ಷನಾಗಿ ಬಾಯಿಗೆ ಕಲ್ಲು ಸಕ್ಕರೆಯನ್ನು ಹಾಕಿ ಅದೃಶ್ಯನಾದನಂತೆ. ತಕ್ಷಣವೇ ಅವರು " ಶ್ರೀನಾಥಾದಿ ಗುರುಗುಹೋ ಜಯತಿ" ಎಂಬ ಕೃತಿಯನ್ನು ಮಾಯಾಮಾಳವಗೌಳ ರಾಗ, ಆದಿತಾಳದಲ್ಲಿ ರಚಿಸಿ ಹಾಡಿ ವಾಗ್ಗೇಯಕಾರರೆನಿಸಿದ್ದರು.

ತಮ್ಮ 18ನೆಯ ವಯಸ್ಸಿನಲ್ಲೇ ಗೃಹಸ್ಥರಾದರೂ, ಸನ್ಯಾಸಿಯಂತೆ ಬಾಳಿದರು. ರಾಜಾಶ್ರಯದಲ್ಲಿದ್ದರೂ, ಮಾನವರ ಆಶ್ರಯವನ್ನು ತ್ಯಜಿಸಿದ್ದರು. ರಾಜನನ್ನು ದೈವಾಂಶಸಂಭೂತನೆಂದೇ ನಂಬಿದ್ದರು. ಕಾಂಚೀಪುರದಲ್ಲಿದ್ದಾಗ ಕಾಮಾಕ್ಷಿ ದೇವಿಯ ಸನ್ನಿಧಿಯಲ್ಲಿ ನಾಲ್ಕು ವರ್ಷದ ಕಾಲ ಶ್ರೀವಿದ್ಯಾ ಮಹಾಮಂತ್ರೋಪಾಸನೆಯನ್ನು ಮಾಡಿದರು. ಅಲ್ಲಿ ಉಪನಿಷತ್ ಬ್ರಹ್ಮರೊಡನೆ ವೇದಾಂತ ವಿಷಯಗಳನ್ನು ಚರ್ಚಿಸಿ ರಾಮಾಷ್ಟಪದಿಗೆ, ರಾಗ ತಾಳಗಳನ್ನು ಸಂಯೋಜಿಸಿದ್ದರು.

ಎಟ್ಟಿಯಾಪುರಕ್ಕೆ ಹೋಗುವ ದಾರಿಯಲ್ಲಿ ಕ್ಷಾಮ ಪೀಡಿತ ಪ್ರದೇಶದಲ್ಲಿ ಅಮೃತವರ್ಷಿಣಿ ರಾಗದ ಕೃತಿಯನ್ನು ಹಾಡಿ ಮಳೆ ಸುರಿಸಿದರಂತೆ. ಮೀನಾಕ್ಷಿಯನ್ನು ಕುರಿತು ಹಾಡುತ್ತ ಮನ್ಮಥ ಸಂವತ್ಸರ ಚರ್ತುದಶಿಯಂದು ಅಂದರೆ 1835ರಲ್ಲಿ ತಮ್ಮ ಅರವತ್ತನೆ ವಯಸ್ಸಿನಲ್ಲಿ ಎಟ್ಟಿಯಾಪುರದಲ್ಲಿ ಇಹಲೋಕ ತ್ಯಜಿಸಿದರು. ಸ್ವತಃ ರಾಜನೇ ನಿಂತು ಶಾಸ್ತ್ರೋಕ್ತವಾಗಿ ದೀಕ್ಷಿತರ ಉತ್ತರ ಕ್ರಿಯೆಯನ್ನು ನಡೆಸಿದರು.

ಚೌಕವರ್ಣ, ಕೃತಿ, ರಾಗಮಾಲಿಕೆ ಮುಂತಾದ ವಿವಿಧರೀತಿಯ ರಚನೆಗಳು 'ಗುರುಗುಹ' ಅಂಕಿತದೊಡನೆ ಅವರಿಂದ ಮೂಡಿಬಂದವು ಅವರ ರಚನೆಗಳಲ್ಲಿ ಸಂಸ್ಕೃತವೇ ಮುಖ್ಯವಾದರೂ ತೆಲುಗು, ತಮಿಳು ಭಾಷೆಯಲ್ಲೂ ಒಂದೆರಡು ರಚನೆ ಇವೆ.

ಮೇಳವನ್ನು ರಾಗವಾಗಿ ಪರಿವರ್ತಿಸಿ ಕೃತಿಗಳನ್ನು ರಚಿಸಿದರು. ಕೆಲವು ಹಿಂದೂಸ್ಥಾನಿ ರಾಗವನ್ನು ಕರ್ನಾಟಕ ಸಂಗೀತದ ರಾಗವಾಗಿ ಪರಿವರ್ತಿಸಿ ಕೃತಿಗಳನ್ನು ರಚಿಸಿದರು. ಈ ರಚನೆಗಳಲ್ಲಿ ಆದಿ, ರೂಪಕ, ಸುಳಾದಿ ಸಪ್ತತಾಳಗಳನ್ನು ಮಾತ್ರ ಅಳವಡಿಸಿಕೊಂಡರು. ಛಾಪುತಾಳದಲ್ಲಿ ಇವರ ರಚನೆ ಕಂಡುಬರುವುದಿಲ್ಲ. ರಾಗಗಳಲ್ಲಿ ವೆಂಕಟಮಖಿಯವರ ಅಸಂಪೂರ್ಣ ಪದ್ಧತಿಯನ್ನು ಅನುಸರಿಸಿದ್ದರು. ಇವರ ಕೃತಿಗುಚ್ಛದಲ್ಲಿ ಮುಖ್ಯವಾದುದು ನವಗ್ರಹ ಕೃತಿ, ಕಮಲಾಂಬ ನವಾವರ್ಣ, ಷೋಡಶ ಗಣಪತಿ ಕೃತಿಗಳು, ವಿಭಕ್ತಿ ಕೃತಿಗಳು ಗುರುಪರವಾದ ಕೃತಿಗಳು. ಪಂಚಲಿಂಗ ಸ್ಥಳ ಕೃತಿಗಳು ಮುಂತಾದವು ಇವೆ. ಪಾಶ್ಚಾತ್ಯ ಮಟ್ಟ ಸಾಹಿತ್ಯವನ್ನು ರಚಿಸಿದರು.

ಇವರ ಶೈಲಿಯನ್ನು ನಾರಿಕೇಳಪಾಕಕ್ಕೆ ಹೋಲಿಸಿಲಾಗಿದೆ. ಇವರ ಶಿಷ್ಯರಲ್ಲಿ ಪ್ರಸಿದ್ಧರಾದವರು ತಂಜಾವೂರು ಪೊನ್ನಯ್ಯ, ವಡಿವೇಲು, ಶಿವಾನಂದ, ತಿರುವಾರೂರು ಶುದ್ಧ ಮೃದಂಗ ತಂಬಿಯಪ್ಪನ್.

# ಮೈಸೂರು ವಾಸುದೇವಾಚಾರ್ಯ





ಚಿರನೂತನವಾಗಿ, ಸಂಗೀತ ರಸಿಕರ ಮನಸೆಳೆಯುತ್ತಿರುವ 'ಬ್ರೋಚೇವಾರೆವರುರಾ' ಕೃತಿಯ ರಚನಕಾರರೇ ಮೈಸೂರು ವಾಸುದೇವಾಚಾರ್ಯರು. ಹಿಂದಿನ ಮತ್ತು ಇಂದಿನ ಪರಂಪರೆಗೆ ಸೇತುವೆಯಾದವರು. ತಾವು ಕಂಡು ಕೇಳಿದ ಅನುಭವಾಮೃತವನ್ನು ಮುಂದಿನ ಪೀಳಿಗೆಯವರೂ ಸವಿಯುವ ಸಲುವಾಗಿ 'ನಾ ಕಂಡ ಕಲಾವಿದರು' ಎಂಬ ಹೊತ್ತಿಗೆಯಲ್ಲಿ ಕಲಾವಿದರನ್ನು ಆಡು ಭಾಷೆಯಲ್ಲಿ ಸರಳವಾಗಿ ಚಿತ್ರಿಸಿ ಸಂಗೀತ ಪ್ರಪಂಚಕ್ಕೆ ಅಪಾರ ಕೊಡುಗೆಯನ್ನಿತ್ತಿದ್ದಾರೆ.

ವೇದಾಧ್ಯಯನ ಸಂಪನ್ನರಾದ ಸುಬ್ರಹ್ಮಣ್ಯಾಚಾರ್ಯರ ಮೂರನೇ ಪತ್ನಿ ಕೃಷ್ಣಾಬಾಯಿಯವರಿಗೆ 1865ನೇ ಮೇ 28ರಂದು ವಾಸುದೇವಾಚಾರ್ಯರ ಜನನ. ತಂದೆ ಪ್ರವಚನ ಮಾಡುವಾಗ, ಮಗನನ್ನೆತ್ತಿಕೊಂಡಾಗಲೆಲ್ಲಾ ಶ್ಲೋಕಗಳನ್ನು ರಾಗವಾಗಿ ಹಾಡುತ್ತಿದ್ದರು. ವಾಸುದೇವನಿಗೆ ಮೂರು ವರ್ಷದಲ್ಲೇ ಪಿತೃವಿಯೋಗವುಂಟಾಗಿ ತಾಯಿಯ ತಂದೆ ಗೋಪಾಲಾಚಾರ್ಯರ ಆಶ್ರಯವಾಯಿತು. ಸುಬ್ರಹ್ಮಣ್ಯಾಚಾರ್ಯರಿಗೆ ಅರಮನೆಯಿಂದ ಬರುತ್ತಿದ್ದ ಸಂಬಳದ ಆಧಾರದ ಮೇಲೆ ವಾಸುದೇವನಿಗೆ ಸಂಬಳ ಮಂಜೂರು ಮಾಡಿಸಿಕೊಂಡು ಆ ಹಣದಿಂದ ಸಂಸಾರವು ನಡೆಯುವಂತೆ ಮಾಡಿದರು.

ಇವರದು ವೈದಿಕ ಮನೆತನ. ಮಾಧ್ವ ಬ್ರಾಹ್ಮಣರು. ಪೆರಿಯ ತಿರುಮಲ ಸ್ವಾಮಿಯವರಲ್ಲಿ ಬಾಲಕ ವಾಸುದೇವನಿಗೆ ಸಂಸ್ಕೃತ ಪಾಠ. ಸಂಸ್ಕೃತದಲ್ಲಿ ಪ್ರೌಢ ಶಿಕ್ಷಣಕ್ಕಾಗಿ ಮೈಸೂರು ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಗೆ ಸೇರಿಸಿದರು. ವಾಸುದೇವನಿಗೆ ಸಂಗೀತದಲ್ಲಿ ಆಸಕ್ತಿಯಿದ್ದರೂ ತಾತನಿಂದ ಪ್ರೋತ್ಸಾಹ ಸಿಗಲಿಲ್ಲ. ಬಾಲಕನ ಸೋದರಮಾವ ಪದ್ಮನಾಭಾಚಾರ್ಯರ ಸಹಾಯದಿಂದ ಸುಬ್ಬರಾಯರಲ್ಲಿ ಶಿಷ್ಯತ್ವ. ಸ್ವರಜತಿಯ ಹಂತ ತಲುಪಿದ ಕೂಡಲೇ ತಾತನಿಂದ ಕಲಿಕೆಗೆ ವಿಘ್ನವುಂಟಾಯಿತು. ಸಂಸ್ಕೃತ ಕಾಲೇಜಿನಲ್ಲಿ ಸಂಗೀತವು ಅಧ್ಯಯನ ವಿಷಯವಾಗಿದ್ದು ಇವರ ಪಾಲಿಗೆ ವರದಾನವಾಯಿತು. ವೀಣೆ ಪದ್ಮನಾಭಯ್ಯನವರಲ್ಲಿ ಇವರ ಸಂಗೀತಾಭ್ಯಾಸ ಮುಂದುವರಿಯಿತು.

ಒಮ್ಮೆ ವೀಣೆಶೇಷಣ್ಣನವರ ಕಛೇರಿ ಕೊಯಮತ್ತೂರಿನಲ್ಲಿ. ಕಛೇರಿಯಾದ ನಂತರ ವಾಸುದೇವಾಚಾರ್ಯರನ್ನು ಹಾಡಲು ಹೇಳಿದರು. ಸ್ಥಳದಲ್ಲೇ ಆಶುಕವಿತೆಯನ್ನು ಸಂಸ್ಕೃತದಲ್ಲಿ ರಚಿಸಿ ಹಾಡಿ ಶ್ರೋತೃಗಳನ್ನು ಮೆಚ್ಚಿಸಿ ಧನಿಕನಿಂದ ಸನ್ಮಾನ ಪಡೆದರು. ಅಲ್ಲಿಂದ ಹಿಂದುರಿಗಿ ಬರುವಾಗ ರೈಲಿನಲ್ಲೇ ಶಂಕರಾಭರಣ ರಾಗದ ಅಟತಾಳ ವರ್ಣವನ್ನು ಕಂಠಪಾಠ ಮಾಡಿ ಬೆಂಗಳೂರು ನಿಲ್ದಾಣಕ್ಕೆ ಬರುವಷ್ಟರಲ್ಲಿ ವರ್ಣವನ್ನು ವೀಣೆಶೇಷಣ್ಣನವರಿಗೆ ಒಪ್ಪಿಸಿ ಮೆಚ್ಚುಗೆ ಪಡೆದರು.

ಆ : ಸ ರಿ ಗ ಮ ಪ ದ ನಿ ಸೆ ಅವ : ಸೆ ನಿ ದ ಪ ಮ ಗ ರಿ ಸ 15ನೇ ಮೇಳಕರ್ತ.
3 1 1 3 1

ಪ. ॥ ಮಾಯಾತೀತ ಸ್ವರೂಪಿಣೀ ನನ್ನು ಬ್ರೋವವೇ ಮಹಾತ್ರಿಪುರಸುಂದರಿ ಶಂಕರಿ ॥

ಸ.ಚ. ॥ ಮಾಯಾಮಾಳವಗೌಳ ದೇಶಮುನ ಮಹಿಮಗಲ ದೊರಲರ್ಚಿಂಚು ಈಶ್ವರಿ ॥

॥ ಕಾಯಜುನಿವೈರಿಕಿ ಪ್ರಾಣಕಾಂತಾಬೃಹದೀಶ್ವರಿ ॥

॥ ಕೃಪಸೇಯವಲೆನು ಶ್ರೀ ಗುರುಗುಹ ಸಾಮಿಕಿ ನೇ ದಾಸುಡೈತಿ ॥ ಮಾಯಾತೀತ

ಮಾಯಾತೀತ ಸ್ವರೂಪವುಳ್ಳ ಮಹಾತ್ರಿಪುರ ಸುಂದರಿಯೇ ಶಂಕರಿಯೇ ನನ್ನನ್ನು ಪೊರೆ. ಮಾಯಾಮಾಳವಗೌಳ ದೇಶದ ರಾಜನಿಂದ ವಂದಿಸಲ್ಪಡುವ ಮಹಿಮೆಗಳುಳ್ಳ ಈಶ್ವರಿಯೇ, ಮನ್ಮಥನ ವೈರಿಯಾದ ಬೃಹದೀಶ್ವರನ ಪ್ರಾಣಕಾಂತೆಯಾದ ಬೃಹದೀಶ್ವರಿಯೆ ಕೃಪೆ ಮಾಡಬೇಕು. ಶ್ರೀ ಗುರುಗುಹನೆನಿಸಿದ ಷಣ್ಮುಖಸ್ವಾಮಿಗೆ ನಾನು ದಾಸನಾಗಿದ್ದೇನೆ.

ಪ.1 ‖ ಸಾ | ರೀ ಗಾ ‖ ಮಾ | ಪಾ ಪಮ ಗಮ ‖ ಪಾ | ಪಾ ಪದ ‖ ಪಾ | ಮ ಗಮಗ ರಿಸನಿ ‖
‖ ಮಾ | ಯಾ ತೀ ‖ ತ. | ಸ್ವ ರೂ . ಪಿ ‖ ಣೀ | . . ನ ನ್ನು ‖ ಬ್ರೋ | . ವ . . ವೇ . ‖

2 ‖ ಸಾ ರಿ ಸ | ರೀ ಗ ರಿ ಗಾ ಮ ಗ ‖ ಮಾ ಪ ಮ | ಮ ದ ಪಮ ಗ ಮ ‖
‖ ಮಾ . . | ಯಾ . ತೀ . . ‖ ತ . . . | ಸ್ವ ರೂ . ಪಿ ‖ ಣೀ ನನ್ನು ಬ್ರೋವವೇ

3 ‖ ಸಾ ರಿ ಸ ಸಾ | ರೀ ಗ ರಿ ರೀ ಗಾ ಮ ಗ ಗಾ ‖ ಮಾ ಪ ಮ ಮಾ | ‖ ದ ನಿ ‖
‖ ಮಾ . . . | ಯಾ. . .. ತೀ . . . ‖ ತ. . . . . | ಸ್ವರೂಪಿ ‖ ಣೀ ನ ನ್ನು ‖

‖ ಸಾ ನಿ ದ | ಪ ಮ ಗ ಮ ಗ ರಿ ಸ ನಿ ‖ 4 ‖ ‖ ದ ನಿ ಸ ರಿ ‖
‖ ಬ್ರೋ . . | . . ವ . . ವೇ . ‖ ‖ ಮಾಯಾತೀತ ಸ್ವರೂಪಿ ‖ ಣೀ ನ . ನ್ನು ‖

‖ ಬ್ರೋವವೇ ‖ ಸಾ ಸ ನಿ | ದಾ ದ ನಿ ದ ಪ ಮಾ ‖ ಗ ಮ ಪ ದ | ಪ ಮ ಗ ಮ ಗಾ ‖
‖ ‖ ಮ ಹಾ | . . ತ್ರಿ . ಪು. ರ. ‖ ಸುಂ . . | ದ . . . ರೀ ‖

‖ ರೀ | ಸ ಸ ರಿ ಗ ಮ ಪ ದ ‖ ನಿ ಸ ನಿ ದ | ಪ ಮ ಗ ಮ ಗ ರಿ ಸ ನಿ ‖
‖ .. | . ಶಂ . . . . ‖ . . . ಕ | . . ರಿ . . . . . ‖ ಮಾಯಾತೀತ

ಸ.ಚ ‖ ಮಾ | ಪಾ ಪ ದ ‖ ಮ ಪ | ಪ ಮ ಗ ರಿ ‖ ಸ ರಿ | ಗ ಮ ಪಾ ‖
‖ ಮಾ | ಯಾಮಾ ‖ ಳ ವ | ಗೌ . . ಳ ‖ ದೇ | ಶ ಮು ನ. ‖

‖ ದ ನಿ | ಸ ನಿ ದ ಪ ‖ ದ ನಿ | ದ ಪ ದ ಮಾ ಪಾ ‖ ಗ ಮ ಪ ದ | ಪ ಮ ಗ ಮ ಗ ರಿ ಸ ನಿ ‖
‖ ಮಹಿ | ಮ ಗ ಲ ದೊ ‖ ರ ಲ | . ರ್ಚಿ . . ಚು ‖ ಈ . . . | . . ಶ್ವ . . ರಿ . . ‖

ಮ.ಕಾ ‖ ಮ ಗ ರಿ ಸ | ನಿ ಮಾ ಗ ರಿ ಸಾ ನಿ ‖ ಸ ರಿ ಗ ಮ | ಪ ಮ ಗ ಮ ಪ ದ ನಿ ಸ ‖
‖ ಕಾ ಯಜು | ನಿ ವ್ಯೈ. ರಿ ಕಿ ಪ್ರಾ ಣ ‖ ಕಾಂ ತಾ | ಬೃಹ ಧೀ ಶ್ವ ರಿ ಕೃ ಪ ‖

‖ ರಿ ನಿ ಸ ದ | ನಿ ಪ ದ ಮ ಪ ಗ ಮ ನಿ ‖ ದ ಪ ಮ ದ | ಪ ಮ ಗ ಮ ಗ ರಿ ಸ ನಿ ‖
‖ ಸೇ ಯ ವ | ಲೆ ನು ಶ್ರೀ ಗು ರು ಗು ಹ ‖ ಸಾ ಮಿ ಕಿ | ನೇ ದಾ ಸು ಡ್ಯೈ. ತಿ ‖ ಮಾಯಾ

19. ರಾಗ : ಕಲ್ಯಾಣಿ　　ಹಿಮಾದ್ರಿಸುತೇ – ಶ್ಯಾಮಾಶಾಸ್ತ್ರಿ　　ತಾಳ : ರೂಪಕ

ಆ : ಸ ರಿ ಗ ಮ ಪ ದ ನಿ ಸ　　ಅವ : ಸ ನಿ ದ ಪ ಮ ಗ ರಿ ಸ　　65ನೇ ಮೇಳಕರ್ತ.
3 2　2 3 2

ಪ. । ಹಿಮಾದ್ರಿಸುತೇ ಪಾಹಿಮಾಂ ವರದೇ ಪರದೇವತೇ ॥

ಅ.ಪ. । ಸುಮೇರು ಮಧ್ಯವಾಸಿನಿ ಶ್ರೀ ಕಾಮಾಕ್ಷಿ ॥ ಹಿಮಾದ್ರಿಸುತೇ

ಚ. । ಶ್ಯಾಮಕೃಷ್ಣ ಸೋದರಿ ಗೌರೀ ಪರಮೇಶ್ವರಿ ಗಿರಿಜಾಲ ನೀಲವೇಣಿ ಕೀರವಾಣಿ ಶ್ರೀ ಲಲಿತೆ ॥ ಹಿಮಾದ್ರಿಸುತೇ

ಹಿಮವಂತನ ಮಗಳಾದ ಕಾಮಾಕ್ಷಿ, ಪರದೇವತೆಯಾಗಿ ವರವನ್ನು ನೀಡುವವಳೇ, ಮೇರು ಪರ್ವತದ ಮಧ್ಯದಲ್ಲಿ ವಾಸಿಸುವವಳೇ, ಶ್ಯಾಮಕೃಷ್ಣನ ಸಹೋದರಿಯಾದ ಗೌರಿ, ಪರಮೇಶ್ವರಿ, ಗಿರಿಜೆ, ನೀಲವೇಣಿ, ಕೀರವಾಣಿ, ಶ್ರೀ ಲಲಿತೆಯು ನಮ್ಮನ್ನು ರಕ್ಷಿಸಲಿ.

ಪ. 1 || ; | ರಿ ಸಾ ಸ || ರಿ ರಿ | , ಗ ಮ ಪಾ ಮಾ || ಪಾ | ; ಗ ದ ಪ ಮ || ಗ ರೀ , | ಗ ಮ ಪ ದ ಪ ಮ ಗಾ ||
|| .. | ಹಿ ಮಾ ದ್ರಿ || ಸು ತೆ | ೯ ಪಾ . . ಹಿ. || ಮಾಂ | .. ವ . ರ . . || ದೇ . . | ಪ . ರ . ದೇ . . ||

2 || ರಿ ಸ | ಗ ರಿ ಸಾ ಸ || ರಿ ರಿ | , ಗ ಮ ಪಾ ಮಾ || ಗ ಮ ಪಾ | ಮ ಪ ದಾ ಗ ದ ಪ ಮ || ಗ ರೀ , | ಗ ಮ ಪ ದ ಪ ಮ ಗಾ ||
|| ವ ತೆ | ಹಿ . ಮಾ ದ್ರಿ || ಸು ತೆ | ೯ ಪಾ . . ಹಿ . || ಮಾಂ .. | . . . . ವ . ರ . || ದೇ . | ಪ . ರ . ದೇ . . ||

3 || ರಿ ಸ | || | || ಗ ಮ ಪ ದ | ನಿ ಸಾ ನಿ ನಿ ದ ಪ ಮ || ಗ ರೀ, | ನಿ ದ ನಿ ದ ಪ ಮ ಗ ರಿ ||
|| ವ ತೆ | ಹಿಮಾದ್ರಿ || ಸುತೆ | ೯ಪಾಹಿ || ಮಾಂ . . | . . . . ವ . ರ . || ದೇ . | ಪ . ರ . ದೇ . . ||

4 || ಗ ರಿ ಸಾ | || | || ಗ ಮ ಪ ದ | ನಿ ಸ ರಿ ಗ ಗ ರಿ ಸ ನಿ ||
|| ವ . ತೆ. | ಹಿಮಾದ್ರಿ || ಸುತೆ | ೯ ಪಾಹಿ || ಮಾಂ . . | . . . . ವ . ರ. ||

|| ದ ಪ ಮ ಗ | ಗಾ ಸ ನಿ ದ ಪ ಮ ಗ || ಗ ರಿ ಸಾ | ||
|| ದೇ . . | ಪ. ರ . ದೇ . . || ವ .ತೆ. | ಹಿಮಾದ್ರಿಸುತೇ ||

ಅ.ಪ. 1 || ; | ರಿ ಸಾ ಸ ನಿ || ದ ನಿ ನಿ ದ | ಪ ಮ ಪ ದ ನಿ || ಸಾ | ; ; || ; | ; ; ||
|| .. | ಸು ಮೇ ರು . || ಮ ಧ್ಯ | . . ವಾ ಸಿ || ನೀ | .... || .. | .... ||

2 || ಮ ಪ ದ ನಿ | ಸಾ ರಿ ಗ ರಿ ಸ || ಸ ನಿ ನಿ ದ | ಪ ಮ ಪ ದ ರಿ || ಸಾ | ; ; || ; | ; ; ||
|| ಅಂ. ಬ. | ಸು ಮೇ . ರು || ಮ . . . | ಧ್ಯ . ವಾ ಸಿ || ನೀ | .... || .. | .... ||

3 || | || ನಿ ರಿ ಸ ಸ | ನಿ ದ ಪ ದ ನಿ || ಸಾ | , ನಿ ದ ಪ ಮ ಗ ||
|| ಅಂಬ | ಸುಮೇರು || ಮ. . . | ಧ್ಯ . ವಾ ಸಿ || ನೀ | . . ಶ್ರೀ . . ||

|| ಸ ನಿ ದಾ | ಪ ದ ನಿ ದ ಪ ಮ ಗಾ || ರಿ ಸ |
|| ಕಾ . . | ಮಾ . . . . . . || . ಕ್ಷಿ | ಹಿಮಾದ್ರಿಸುತೇ ಪಾಹಿಮಾಂ ॥

ಚ. ‖ , ಸ | ಸ ಸ ನಿ ದಾ ಪಾ ‖ ಪ ಮ ನಿ ದ | ಪ ಮ ಗ ಮ ಪಾ , ಮ ‖ ನಿ ದ ಪ ಮ | ದ ದ ದ ನೀ ಪ ‖

‖ . ಶ್ಯಾ | ಮ ಕೃ . . ಷ್ಣ ‖ ಸೋ . . | ದ . ರಿ . ಗೌ . . ‖ ರಿ . . . | ಪ ರ ಮೇ . . ‖

‖ ದ ನಿ | ಸ ನಿ ಸಾ ‖ ಸ ನಿ ದಾ | ಗ ರಿ ಸಾ ನಿ ‖ ಪ ದ ನಿ ರಿ | ಸ ನಿ ಪಾ ನಿ ದ ‖

‖ ಶ್ವ ರಿ | ಗಿ ರಿ ಜಾ ‖ . . . . | ಲ . ನೀ ಲ ‖ ವೇ . . | ಣಿ. ಕೀ ರ . ‖

‖ ಪ ಮ ಗ ಮ | ರೀ ಗಾ ನಿ ದ ಪ ಮ ‖ ಗ ರಿ ಸಾ | ‖

‖ ವಾ . . | ಣಿ. ಶ್ರೀ . . ಲ . ‖ ಲಿ . ತೆ. | ಹಿಮಾದ್ರಿಸುತೇ ಪಾಹಿಮಾಂ ‖

## ಸಾರಸ ಸುವದನ – ಸ್ವಾತಿ ತಿರುನಾಳ್

3. ರಾಗ : ಕಲ್ಯಾಣಿ ತಾಳ : ಆದಿ

ಆ : ಸ ರಿ ಗ ಮ ಪ ದ ನಿ ಸ ಅವ : ಸ ನಿ ದ ಪ ಮ ಗ ರಿ ಸ 65ನೇ ಮೇಳಕರ್ತ.
3 2 2 3 2

ಪ. ॥ ಸಾರಸ ಸುವದನ ಮಹನೀಯ ಚರಿತ ಜಯಜಯ ಸಕಲ ವಿಬುಧ ವರಪರಿಣತ ॥

ಅ.ಪ. ॥ ಮಾರಮಣ ವರದಾಶೀಲ ಮಾಯಾಮೇಯ ಸಕಲಜನ ಚರಣ ॥ ಸಾರಸ

ಚ. ॥ ಪಂಕಜರುಚಿ ಮದಹರನಯನ ರಿಪುಸೂದನ ಶೀತಲ । ಭಾನುಕುಲತಿಲಕ ಫಣಿಶಯನ ॥

॥ ಶಂಕರ ವಿಧಿ ಹರಿ ಸನ್ನುತ ಸಾರಸನಾಭ ಮನೋಹರ ॥ ಸಾರಸ

ಕಮಲವದನ ! ಮಹತ್ವಪೂರ್ಣವಾದ ಚರಿತೆಯುಳ್ಳವನೂ, ಸಕಲ ಪಂಡಿತರಿಂದಲೂ ಪರಿಣತರಿಂದಲೂ ಜಯಘೋಷವನ್ನು ಪಡೆಯುವವನೂ ಆದ ಪದ್ಮನಾಭ. ಲಕ್ಷ್ಮೀಪತಿಯೂ ವರಗಳನ್ನು ಕೊಡುವವನೂ, ಮಾಯನೂ ಅಮೇಯನೂ (ಅಂದರೆ ಅಗೋಚರನು ಹಾಗೂ ಅಳತೆಗೆ ಮೀರಿದವನೂ) ಎನಿಸಿದರೂ ಎಲ್ಲರಿಂದಲೂ ವಂದನೀಯನು. ಕಮಲದ ರುಚಿಯನ್ನು ಸವಿಯದ ದುಂಬಿಯಂತೆ ಕಣ್ಣುಗಳುಳ್ಳವನು, ಶತ್ರುವನ್ನು ಸಂಹರಿಸುವವನೂ ಶೀತಲನು, ಸೂರ್ಯವಂಶಕ್ಕೆ ತಿಲಕಪ್ರಾಯನಾದ ನಾಗಶಯನನಾದ, ಶಂಕರ, ಬ್ರಹ್ಮ ಮತ್ತು ದೇವೇಂದ್ರನಿಂದ ವಂದಿಸಲ್ಪಡುವ ಪರಬ್ರಹ್ಮಸ್ವರೂಪನಾದ, ಮನೋಹರನಾದ ಪದ್ಮನಾಭ.

ಪ.1 ‖ ಸಾ ಸ ಸ ನಿ ದ ಪ ಮ ಗ ಗ ಸ ನಿ ದಾ ಪ ದ ಪ ಮ ಗ ರಿ ಸಾ |
‖ ಸಾ ರ ಸ ಸು ವ ದ ನ ಮ ಹ ನೀ . . ಯ. ಚ . ರಿ . ತ. |

| ಸ ಸ ರಿ ರಿ ಗ ದ ಪ ಮ ಗ ರಿ ಗ ಮ | ಪಾ ಪಾ ಸ ನಿ ಗ ರಿ ಸ ರಿ ಸ ನಿ ದ ಪ ದ ನಿ ‖
| ಜ ಯ ಜ ಯ ಸ . ಕ . ಲ . ವಿ . | ಬು ಧ. ವ . ರ . ಪ. ರಿ . ಣ . ತ . ‖

2 ‖ ಸ ನಿ ಗ ರಿ ಸ ನಿ ರಿ ಸ ನಿ ದ ಸ ನಿ ನಿ ದ ಪ ಮ
‖ ಸಾ . . ರ . ಸ . ಸು . ವ . ದ . ನ . ಮಹನೀಯಚರಿತ ಜಯಜಯಸಕಲವಿಬುಧ ವರಪರಿಣತ ‖ ಸಾರಸ

ಅ.ಪ.1 || ಪಾ ,ಗಮಪ ದನಿಸಾ ; ಸನಿರಿಸ ಸನಿನಿದ |
|| ಮಾ.ರಮಣ ವರದ. .. ಶೀ . . ಲ . . . | ಮಾರಮಣ ವರ | ದ ಶೀಲ ||

2. || ಸನಿದಾ ಗರೀ , | ಸಾರಿಗ ರಿಸ ಸಾ ಸನಿರಿಸ ಸನಿನಿದ |
|| ಮಾರಮಣ ವರದ ಶೀ . . ಲ . .. | ಮಾ . . ಯಾ . . ಮೇ . . ಯ . . |

| ಸನಿದಗಮಪದನಿ ||
| ಸಕಲಜನ ಚರಣ || ಸಾರಸ ಸುವದನ

ಚ. || ಪಾ ನಿದಪಮಗ ರಿಸಸರಿಸ ರೀ ರಿರಿ | ಗಮ ಪಮ ಪದದನಿ | ಪಾ ; ; ; ||
|| ಪಂ.ಕ ಜರುಚಿ ಮದಹರ ನಯನ. ರಿಪು | ಸೂ ದನ ಶೀ ತ. | ಲ. ...... ||

|| ಸಾರಿ ಸನಿದಾ ಪಮ ಗರಿ ಸಾ ರೀ ; ರಿರಿ ಗದಪಮ | ಗರೀ , ಸಾ ; ; | ; ; ; ; ||
|| ಭಾ. ನು. . . ಕುಲ ತಿ . ಲ. ಕ. .. ಫಣಿ ಶ . ಯ. | ನ . . . . . .... | .. .. .. .. ||

ಚ.1 || ಪಾ , ಗಮ ಪದ ನಿ ಸಾ ; ಸನಿರಿಸ ಸನಿ ನಿದ | ||
|| ಶಂ.. ಕರ ವಿಧಿ ಹರಿ. .. ಸ . . . ನ್ನು. ತ . | ಶಂಕರ ವಿಧಿ ಹರಿಸನ್ನುತ ||

2. || ಸನಿದಾ ಗ ರಿ | ಸಾರಿಗ ರಿಸ ಸನಿರಿಸ ಸನಿನಿದ | ಗ ನಿದ ಗಮಪದನಿ ||
|| ಶಂಕರ ವಿಧಿ ಹರಿಸ . . . ನ್ನುತ | ಸಾ . . ರಸ ನಾ . . ಭ . . . | ಮನೋಹ . ರ . . ||

ಸಾರಸ ಸುವದನ

# ಮಾದರಿ ಪ್ರಶ್ನಪತ್ರಿಕೆ

## ಪ್ರಶ್ನಾವಳಿಗಳು

**ಒಂದು ವಾಕ್ಯದಲ್ಲಿ ಉತ್ತರಿಸಿ;**

1) ನಾಗಸ್ವರಾವಳಿ ರಾಗವು ಯಾವ ಮೇಳದಲ್ಲಿ ಜನ್ಯ ?

2) ಕೃತಿಗಳಲ್ಲಿ ಸಂಗತಿಗಳನ್ನು ರೂಢಿಗೆ ತಂದವರು ಯಾರು ?

3) ಮೈಸೂರು ವಾಸುದೇವಾಚಾರ್ಯರ ಅಂಕಿತ ಏನು ?

4) ಜಾತಿಗಳನ್ನು ಹೆಸರಿಸಿ.

5) ಅಭ್ಯಾಸ ಗಾನದ ರಚನೆಗಳು ಯಾವುವು ?

**ಹೊಂದಿಸಿ ಬರೆಯಿರಿ :**

| | | |
|---|---|---|
| 1) | ಸರಳೆವರಸೆಗಳು | ಕೂಡಲಸಂಗಮ ದೇವ |
| 2) | ಶ್ರುತಿ ವಾದ್ಯ. | ಭಾಷಾಂಗ ರಾಗ |
| 3) | ಅನುದ್ರುತ | ಮಾಯಾಮಾಳವಗೌಳ |
| 4) | ಅನ್ಯಸ್ವರ | ಝಂಪೆ ತಾಳ |
| 5) | ಬಸವಣ್ಣ | ತಂಬೂರಿ |

**ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;**

1) ಮಾಯಾಮಾಳವಗೌಳ

2) ಮೋಹನ

3) ಖರಹರಪ್ರಿಯ

**ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;**

1) ಪ್ರಕೃತಿ ಮತ್ತು ವಿಕೃತಿ ಸ್ವರಗಳು

2) ಸಂಚಾರಿ ಗೀತೆ

3) ಜತಿಸ್ವರ

**ಸುಳಾದಿ ಸಪ್ತತಾಳಗಳನ್ನು ವಿವರಿಸಿ ;**

**ಶ್ರೀ ಪುರಂದರ ದಾಸರ ಜೀವನ ಚರಿತ್ರೆಯನ್ನು ಬರೆದು ಅವರು ಕರ್ನಾಟಕ ಸಂಗೀತಕ್ಕೆ ನೀಡಿರುವ**

**ಉತ್ತರಗಳು ;**

ಒಂದು ವಾಕ್ಯದಲ್ಲಿ ಉತ್ತರಿಸಿ;

1) 29ನೇ ಧೀರಶಂಕರಾಭರಣ

2) ಶ್ರೀ ತ್ಯಾಗರಾಜರು

3) ವಾಸುದೇವ

4) ಜಾತಿಗಳಲ್ಲಿ 5 ವಿಧ . ಅವು

| | | | |
|---|---|---|---|
| 1] | ತಿಶ್ರ ಜಾತಿ | = | 3 ಅಕ್ಷರಗಳು |
| 2] | ಚತುರಶ್ರ ಜಾತಿ | = | 4 ಅಕ್ಷರಗಳು |
| 3] | ಖಂಡ ಜಾತಿ | = | 5 ಅಕ್ಷರಗಳು |
| 4] | ಮಿಶ್ರ ಜಾತಿ | = | 7 ಅಕ್ಷರಗಳು |
| 5] | ಸಂಕೀರ್ಣ | = | 9 ಅಕ್ಷರಗಳು |

5) ಅಭ್ಯಾಸ ಗಾನದ ರಚನೆಗಳು ಯಾವುದಂದರೆ ; ಸ್ವರಾವಳಿ, ಗೀತೆಗಳು, ಲಕ್ಷಣ ಗೀತೆ, ಜತಿಸ್ವರ, ಸ್ವರಜತಿ

**ಹೊಂದಿಸಿ ಬರೆಯಿರಿ;**

| | | |
|---|---|---|
| 1) | ಸರಳೆವರಸೆಗಳು | ಮಾಯಾಮಾಳವಗೌಳ |
| 2) | ಶ್ರುತಿ ವಾದ್ಯ. | ತಂಬೂರಿ |
| 3) | ಅನುದ್ರುತ | ಝಂಪೆ ತಾಳ |
| 4) | ಅನ್ಯಸ್ವರ | ಭಾಷಾಂಗ ರಾಗ |
| 5) | ಬಸವಣ್ಣ | ಕೂಡಲಸಂಗಮ ದೇವ |

**ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;**

**ರಾಗ : ಮಾಯಾಮಾಳವಗೌಳ**

ಆ : ಸ ರಿ ಗ ಮ ಪ ದ ನಿ ಸ

ಅ : ಸ ನಿ ದ ಪ ಮ ಗ ರಿ ಸ

15ನೇ ಮೇಳಕರ್ತ. ಜನಕರಾಗ. ಎಪ್ಪತ್ತೆರಡು ಮೇಳಕರ್ತಗಳ ರಚನೆಯಾದ ಮೇಲೆ ಮಾಳವಗೌಳವೆಂದಿದ್ದ ಹೆಸರಿಗೆ ಕಟಪಯಾದಿ ನಿಯಮಕ್ಕನುಸಾರವಾಗಿ 'ಮಾಯಾ' ಎಂಬ ಪದವನ್ನು ಸೇರಿಸಿದ್ದಾರೆ. ಇದು ಮೂರ್ಛನ ಕಾರಕ ಮೇಳ. ಸಂಪೂರ್ಣರಾಗ , ರಾಗಾಂಗರಾಗ.

ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಶುದ್ಧ ರಿಷಭ, ಅಂತರ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಶುದ್ಧ ಧೈವತ ಮತ್ತು ಕಾಕಲಿ ನಿಷಾದ. ಸರ್ವಸ್ವರಗಮಕವರಿಕ ರಕತಿ ರಾಗ. ತ್ರಿಸ್ಥಾಯಿ ರಾಗ. ಅನೇಕ ಜನ್ಯ ರಾಗಗಳನ್ನುಳ್ಳ ರಾಗ. ಪ್ರಾರಂಭದಲ್ಲಿ ಕಲಿಯಲು ಸುಲಭವಾಗಿರುವುದರಿಂದ, ಸ್ವರಾವಳಿಗಳು ಈ ರಾಗದಲ್ಲಿವೆ.

**ಪ್ರಸಿದ್ಧ ರಚನೆಗಳು**

| | | | |
|---|---|---|---|
| ಕೃತಿ | ತುಳಸೀದಳ | ರೂಪಕ | ತ್ಯಾಗರಾಜರು |
| ಕೃತಿ | ಶ್ರೀನಾಥಾದಿಗುರುಗುಹೊ | ಆದಿ | ಮುತ್ತುಸ್ವಾಮಿ ದೀಕ್ಷಿತರು |
| ಕೃತಿ | ಮಾಯಾತೀತ | ರೂಪಕ | ತಂಜಾವೂರು ಪೊನ್ನಯ್ಯ |

**ರಾಗ : ಮೋಹನ**

ಆ : ಸ ರಿ ಗ ಪ ದ ಸ

ಅ : ಸ ದ ಪ ಗ ರಿ ಸ

ಜನ್ಯರಾಗ. 28ನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ. ಷಡ್ಜ ಮತ್ತು ಪಂಚಮಗಳೊಡನೆ, ಚತುಶ್ರುತಿ ರಿಷಭ, ಅಂತರ ಗಾಂಧಾರ, ಚತುಶ್ರುತಿ ಧೈವತ ಸ್ವರಗಳು ಈ ರಾಗಕ್ಕೆ ಬರುತ್ತದೆ. ಔಡವರಾಗ. ವರ್ಜ್ಯರಾಗ. ಮಧ್ಯಮ ಮತ್ತು ನಿಷಾದ ಸ್ವರಗಳು ವರ್ಜ್ಯ. ಉಪಾಂಗ ರಾಗ. ಜಂಟಿವರಸೆ ಪ್ರಯೋಗಗಳು, ದಾಟುಸ್ವರ ಪ್ರಯೋಗಗಳೂ ರಾಗಕ್ಕೆ ಸೌಂದರ್ಯವನ್ನು ಕೊಡುತ್ತದೆ. ಸರ್ವಸ್ವರಗಮಕವರಿಕ ರಕ್ತಿರಾಗ. ಸರ್ವಕಾಲದಲ್ಲೂ ಹಾಡಬಹುದಾದಂತಹ ರಾಗ. ಆದರೂ ರಾತ್ರಿ ವೇಳೆಯಲ್ಲಿ ಶೋಭಿಸುತ್ತದೆ. ಮಂಗಳಕರವಾದ ರಾಗ. ತ್ರಿಸ್ಥಾಯಿ ರಾಗ.

ಪ್ರಸಿದ್ಧ ರಚನೆಗಳು

| | | | | |
|---|---|---|---|---|
| ತಾನವರ್ಣ | : | ನಿನ್ನುಕೋರಿ | ಆದಿ | ರಾಮನಾಡ್ ಶ್ರೀನಿವಾಸಯ್ಯಂಗಾರ್ |
| ಕೃತಿ | : | ರಾಮನಿನ್ನುನಮ್ಮಿನ | ಆದಿ | ತ್ಯಾಗರಾಜರು |
| ಕೃತಿ | : | ರಾರಾ ರಾಜೀವ ಲೋಚನ | ಆದಿ | ಮೈಸೂರು ವಾಸುದೇವಾಚಾರ್ಯರು |

**ರಾಗ : ಖರಹರಪ್ರಿಯ**

ಆ : ಸ ರಿ ಗ ಮ ಪ ದ ನಿ ಸ

ಅ : ಸ ನಿ ದ ಪ ಮ ಗ ರಿ ಸ

22ನೇ ಮೇಳಕರ್ತ. ರಾಗಾಂಗರಾಗ. ಸಂಪೂರ್ಣ ರಾಗ. ಅನೇಕ ಜನ್ಯರಾಗಗಳನ್ನುಳ್ಳ ರಾಗ. ಈ ರಾಗಕ್ಕೆ ಷಡ್ಜ, ಚತುಶ್ರುತಿ ರಿಷಭ, ಸಾಧಾರಣ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಚತುಶ್ರುತಿ ಧೈವತ, ಕೈಶಿಕಿ ನಿಷಾದ ಸ್ವರಗಳು ಬರುತ್ತದೆ. ತ್ಯಾಗರಾಜರು ಈ ರಾಗದಲ್ಲಿಅನೇಕ ಕೃತಿಗಳನ್ನು ರಚಿಸಿದ್ದಾರೆ. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು ಈ ರಾಗದಲ್ಲಿ ರಚಿತವಾಗಿಲ್ಲ. ಘ್ರಸ್ಥಾಯಿ ರಾಗ. ಸರ್ವಸ್ವರಗಮಕವರಿಕ ರಕ್ತಿರಾಗ.

**ಪ್ರಸಿದ್ಧ ರಚನೆಗಳು**

| | | | |
|---|---|---|---|
| ಕೃತಿ | ಚಕ್ಕನಿರಾಜ | ಆದಿ | ತ್ಯಾಗರಾಜರು |
| ಕೃತಿ | ರಾರಾ ಎನಿಪಿಲಚಿತೆ | ಆದಿ | ವಾಸುದೇವಚಾರ್ಯರು |
| ಕೃತಿ | ರಾಮ ನೀಸಮಾನಮೆವರು | ರೂಪಕ | ತ್ಯಾಗರಾಜರು |

**ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;**

1) **ಪ್ರಕೃತಿ ಮತ್ತು ವಿಕೃತಿ ಸ್ವರಗಳು ;**

ಪ್ರಕೃತಿ ಸ್ವರ– ಪ್ರಕೃತಿ ಎಂದರೆ ಇದ್ದಂತೆ ಇರುವುದು ಎಂದರ್ಥ. ಯಾವುದೇ ಶೃತಿ ಭೇದಕ್ಕೂ ಒಳಪಡದೆ, ನಿರ್ದಿಷ್ಟವಾಗಿ ಇದ್ದಂತೆ ಇರುವ ಸ್ವರಗಳನ್ನು ಪ್ರಕೃತಿ ಸ್ವರವೆನ್ನುತ್ತಾರೆ. ಅವುಗಳ ಸ್ಥಾನವು ಬದಲಾವಣೆಯಾಗುವಂತಹುದಲ್ಲ. ಉದಾಹರಣೆಗೆ– ಷಡ್ಜ ಮತ್ತು ಪಂಚಮ.

**ವಿಕೃತಿಸ್ವರ –** ಶ್ರುತಿಭೇದ ಹೊಂದುವ ಸ್ವರಗಳನ್ನು ವಿಕೃತಿ ಸ್ವರ ಎಂದು ಕರೆಯಲಾಗಿದೆ. ವಿಕೃತಿಯೆಂದರೆ ಭಿನ್ನ ರೂಪ ತಾಳುವುದು ಎಂದರ್ಥ. ರಿಷಭ, ಗಾಂಧಾರ, ಧೈವತ, ನಿಷಾದಗಳು ಪ್ರತ್ಯೇಕವಾಗಿ ಮೂರು ವಿಧಗಳಾಗಿವೆ. ಮಧ್ಯಮವು ಎರಡು ವಿಧವಾಗಿವೆ.

**ವಿಕೃತಿ ಸ್ವರಗಳ ಪ್ರಭೇದ**

**ರಿಷಭದಲ್ಲಿ ಮೂರು ವಿಧ**

1. ಶುದ್ಧ ರಿಷಭ, 2. ಚತುಶ್ರುತಿರಿಷಭ, 3. ಷಟ್‌ಶ್ರುತಿರಿಷಭ

**ಗಾಂಧಾರದಲ್ಲಿ ಮೂರು ವಿಧ**

1. ಶುದ್ಧ ಗಾಂಧಾರ, 2. ಸಾಧಾರಣ ಗಾಂಧಾರ 3. ಅಂತರ ಗಾಂಧಾರ

**ಮಧ್ಯಮದಲ್ಲಿ ಎರಡು ವಿಧ**

1. ಶುದ್ಧ ಮಧ್ಯಮ 2. ಪ್ರತಿ ಮಧ್ಯಮ

**ಧೈವತದಲ್ಲಿ ಮೂರು ವಿಧ**

1. ಶುದ್ಧ ಧೈವತ 2. ಚತುಶ್ರುತಿ ಧೈವತ 3. . ಷಟ್‌ಶ್ರುತಿ ಧೈವತ

**ನಿಷಾದದಲ್ಲಿ ಮೂರು ವಿಧ**

1.ಶುದ್ಧ ನಿಷಾದ 2. ಕೈಶಿಕಿ ನಿಷಾದ 3. ಕಾಕಲಿ ನಿಷಾದ

**ಜತಿಸ್ವರ;** ಜತಿಸ್ವರವು ಸಾಹಿತ್ಯರಹಿತವಾದ ರಚನೆ. ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ಹೊಂದಿ ರಾಗದ ಪೂರ್ಣ ಸಂಚಾರಗಳನ್ನು ಭಾವಯುಕ್ತವಾಗಿ ಗಮಕಯುಕ್ತವಾಗಿ ಹೊರಗೆಡಹುವ ತಾಳಬದ್ಧವಾದ ಸಾಹಿತ್ಯಯುಕ್ತ ರಚನೆಯೇ ಜತಿಸ್ವರ. ಈ ರಚನೆಗೆ ನೃತ್ಯದಲ್ಲಿ ಪ್ರಾಧಾನ್ಯತೆ ಹೆಚ್ಚು. ಜತಿಸ್ವರಗಳು ಸಾಮಾನ್ಯವಾಗಿ ಆದಿ ಮತ್ತು ರೂಪಕ ತಾಳಗಳಲ್ಲಿದ್ದು ಮಧ್ಯ ಮತ್ತು ವಿಳಂಬ ಕಾಲಗಳಲ್ಲಿರುತ್ತದೆ. ಚರಣಗಳಲ್ಲಿ ಮಕುಟ ಸ್ವರಗಳ ಮುಕ್ತಾಯವಿರುತ್ತದೆ. ಶ್ಯಾಮಾಶಾಸ್ತ್ರಿಗಳು, ವೀಣೆ ಶೇಷಣ್ಣ, ಮೈಸೂರು ವಾಸುದೇವಾಚಾರ್ಯರು ಸೊಗಸಾದ ಸ್ವರಜತಿ ರಚಿಸಿದ್ದಾರೆ.

ಗಾನಕ್ರಮ : ಪಲ್ಲವಿಯನ್ನು ಎರಡಾವರ್ತಿ ಹಾಡಿ, ಪ್ರತಿಯೊಂದು ಚರಣವನ್ನು ಒಂದು ಅಥವಾ ಎರಡಾವರ್ತಿ ಹಾಡಿದ ನಂತರ ಪಲ್ಲವಿಯನ್ನು ಹಾಡಿ ಪಲ್ಲವಿಯಲ್ಲೇ ಮುಗಿಸಲಾಗುತ್ತದೆ.

ಸಂಚಾರಿ ಗೀತೆ : ರಾಗದ ಸಂಚಾರವನ್ನು ಸರಳವಾಗಿ ಹೊಂದಿರುವುದಕ್ಕೆ ಸಾದಾರಣಗೀತೆ, ಸಾಮಾನ್ಯ ಗೀತೆ, ಲಕ್ಷ್ಯಗೀತೆಯೆಂದೂ ಕರೆಯುತ್ತಾರೆ. ಆದರೆ ಮಲಹರಿ ರಾಗದಲ್ಲಿರುವ ಗೀತೆಗಳನ್ನು ಪಿಳ್ಳಾರಿ ಗೀತೆಗಳೆಂದು ಕರೆಯುವುದು ವಾಡಿಕೆಯಲ್ಲಿದೆ. ಗೀತೆಯು ರಾಗದ ಪ್ರಯೋಗಶೀಲತೆಯನ್ನು ಒಳಗೊಂಡಿರುತ್ತದೆ.

ಧಾತು ಮಾತುಗಳು ಅಂದರೆ ಸಂಗೀತ ಸಾಹಿತ್ಯಗಳು ಸೇರಿ ಗೀತೆಯೆನಿಸುತ್ತದೆ. ಕೆಲವು ಗೀತೆಗಳಲ್ಲಿ ಭಾಗಗಳು ಇರುವುದಿಲ್ಲ. ಇನ್ನು ಕೆಲವು ಗೀತೆಗಳಲ್ಲಿ ಎರಡು ಭಾಗಗಳಿದ್ದು ಅವುಗಳನ್ನು ಅಂತರ ಮತ್ತು ಜಾವಡಿಯೆಂದು ಕರೆಯಲಾಗಿದೆ. ಗೀತೆಗಳು ಅಕ್ಷರ ಕಾಲದ ಎಣಿಕೆಯಿಂದ ಕೂಡಿ, ಸುಳಾದಿ ಸಪ್ತತಾಳದಲ್ಲಿದ್ದು ಹೆಚ್ಚು ಸಾಹಿತ್ಯಾಕ್ಷರಗಳನ್ನು ಹೊಂದಿರುತ್ತದೆ. ಕೆಲವು ಗೀತೆಗಳಲ್ಲಿ, ಅಕಾರ, ಇಕಾರಗಳು, ಅಯ್ಯ, ಇಯ್ಯ ಗಳೆಂಬ ಪದಗಳು ಬರುತ್ತದೆ. ಗೀತೆಗಳನ್ನು ರಕ್ತಿ ರಾಗಗಳಲ್ಲೂ ಘನ ರಾಗಗಳಲ್ಲೂ ರಚಿಸಲಾಗಿದ್ದು ಪುನರಾವರ್ತನೆಯಿಲ್ಲದೆ ಹಾಡಲಾಗುತ್ತದೆ. ದೇವತಾಸ್ತುತಿಯಿಂದ ಕೂಡಿರುವ ಗೀತೆಗಳು ಕನ್ನಡ, ತೆಲುಗು ಮತ್ತು ಭಾಂಡೀರ ಭಾಷೆಗಳಲ್ಲಿದ್ದು ಸರಳವಾಗಿವೆ. ಪುರಂದರ ದಾಸರು, ಪೈದಾಲ ಗುರುಮೂರ್ತಿ ಶಾಸ್ತ್ರಿ, ವೆಂಕಟಮಖಿಯವರು ಗೀತೆಗಳ ವಾಗ್ಗೇಯಕಾರರು. ವಾಗ್ಗೇಯಕಾರರನ್ನೂ ಗುರುತಿಸಲಾಗದ ಅನೇಕ ಗೀತೆಗಳು ಕರ್ಣ ಪರಂಪರೆಯಲ್ಲಿ ಉಳಿದು ಬಂದಿವೆ.

**ಪುರಂದರದಾಸರು (ಕ್ರಿ.ಶ. 1484–1564)**

'ದಾಸರೆಂದರೆ ಪುರಂದರದಾಸರಯ್ಯ' ಎಂಬುದಾಗಿ ಗುರುಗಳಾದ ವ್ಯಾಸರಾಯರಿಂದಲೇ ಮೆಚ್ಚುಗೆ ಪಡೆದ ದಾಸ ಶ್ರೇಷ್ಠರು, ಶ್ರೀ ಪುರಂದರ ದಾಸರು. ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ'ರೆಂದು ಕರೆಯಲಾಗಿದೆ. ಕೋಟ್ಯಾಧೀಶರಾಗಿದ್ದು, ತಮ್ಮ ಸಂಪತ್ತೆಲ್ಲವನ್ನೂ ತ್ಯಜಿಸಿ ಭಗವದ್ಭಕ್ತರಾಗಿ ಹಾಡುತ್ತಾ ಮೋಕ್ಷ ಪಡೆದಂತಹ ಮಹನೀಯರು.

ಪುರಂದರದಾಸರ ತಂದೆ, ವರದಪ್ಪನಾಯಕ. ತಾಯಿ ಲಕ್ಷ್ಮಕ್ಕ. ಇವರದು ಚಿನಿವಾರ ವೃತ್ತಿ. ಪುಣೆಯ ಸಮೀಪದ ಪುರಂದರಗಡ ಎಂಬಲ್ಲಿ ಕ್ರಿ.ಶ. 1484ರಲ್ಲಿ ಪುರಂದರದಾಸರು ಜನಿಸಿದರು. ಅವರಿಗೆ ಶ್ರೀನಿವಾಸ ನಾಯಕನೆಂದು ಹೆಸರಿಟ್ಟರು. ತಿರುಪತಿಯ ಶ್ರೀನಿವಾಸನ ಭಕ್ತರಾದ ಇವರ ತಂದೆ ತಾಯಿಗಳು ಇವರನ್ನು ತಿಮ್ಮಪ್ಪನೆಂದು ಕರೆಯುತ್ತಿದ್ದರು. ಬಾಲ್ಯದಲ್ಲೇ ಸಂಸ್ಕೃತ, ಕನ್ನಡ, ಸಂಗೀತ, ಕಾವ್ಯ, ವ್ಯಾಕರಣ, ಪುರಾಣ, ಉಪನಿಷತ್ತುಗಳಲ್ಲಿ ಪಾರಂಗತರಾದರು. ಅವರಿಗೆ 16 ವರ್ಷ ತುಂಬುತ್ತಲೇ ಸರಸ್ವತಿ ಎಂಬ ಕನ್ಯೆಯೊಡನೆ ವಿವಾಹವಾಯಿತು. ಕೆಲವು ವರ್ಷಗಳ ನಂತರ ತಂದೆಯವರು ಗತಿಸಲು ಶ್ರೀನಿವಾಸನಾಯಕರು ಚಿನಿವಾರ ವೃತ್ತಿಯನ್ನು ಮುಂದುವರಿಸಿದರು. ಶ್ರೀಮನ್ನಾರಾಯಣನ ಸ್ಮರಣೆಯೇ ಅವರ ಜೀವನದ ಉಸಿರಾಯಿತು. ತಮ್ಮ ಗಳಿಕೆಯಿಂದ 'ನವಕೋಟಿ ನಾರಾಯಣ' ಎಂಬ ಬಿರುದನ್ನು ಕೃಷ್ಣದೇವರಾಯನಿಂದ ಪಡೆದರು. ಶತಕೋಟಿನಾರಾಯಣ ನೆನಿಸಲು ದುಡಿಯಲಾರಂಭಿಸಿದರು. ನಾಯಕರ ಮಧ್ಯವಯಸ್ಸಿನಲ್ಲಿ ನಡೆದ ಘಟನೆಯಿಂದ ಅವರ ಜೀವನದ ಗತಿಯೇ ಬದಲಾಯಿತು.

ಒಮ್ಮೆ ವೃದ್ಧರೊಬ್ಬರು ತನ್ನ ಮಗನ ಮುಂಜಿಯ ಸಲುವಾಗಿ ನಾಯಕರ ಸಹಾಯವನ್ನು ಬೇಡಿದರು. ನಾಯಕರಿಂದ ಒಂದು ಕಾಸೂ ದೊರೆಯದೆ, ಅವರ ಪತ್ನಿಯಿಂದ ಮೂಗುತಿಯನ್ನು ದಾನವಾಗಿ ಪಡೆದರು. ಅದೇ ಮೂಗುತಿಯನ್ನು ನಾಯಕರಲ್ಲಿ ವಿಕ್ರಯಿಸಲು ಯತ್ನಿಸಿದರು. ಅದನ್ನು ನಾಯಕರು ತಮ್ಮಲ್ಲಿ ಭದ್ರ ಪಡಿಸಿ, ಹೆಂಡತಿಯನ್ನು ಶಿಕ್ಷಿಸಲು ಪ್ರಯತ್ನಿಸಿದಾಗ, ಅದೇ ಮೂಗುತಿಯು ವಿಷದ ಬಟ್ಟಲಲ್ಲಿ ಕಂಡುಬಂದಿತು. ನಾಯಕರಿಗೆ ಜ್ಞಾನೋದಯವಾಗಿ ಪಶ್ಚಾತಾಪದಿಂದ ತಾವು ಗಳಿಸಿದ ಸಂಪತ್ತೆಲ್ಲವನ್ನೂ ಕೃಷ್ಣಾರ್ಪಣವೆಂದು ಹೇಳಿ, ಹೆಂಡತಿ ಮಕ್ಕಳೊಂದಿಗೆ ಹರಿ ಸಂಕೀರ್ತನೆ ಮಾಡುತ್ತಾ ಸಂಚರಿಸತೊಡಗಿದರು.

ಪಂಪಾ ಕ್ಷೇತ್ರಕ್ಕೆ ಬಂದು, ಅಲ್ಲಿ ವ್ಯಾಸರಾಯರಿಂದ ಮಂತ್ರೋಪದೇಶವಾಗಿ, ಹರಿದಾಸ ದೀಕ್ಷೆಯನ್ನು ಪಡೆದರು. ಅನೇಕ ಹಾಡುಗಳನ್ನು ಪುರಂದರ ವಿಠಲನೆಂಬ ಅಂಕಿತದಲ್ಲಿ ರಚಿಸಿ, ಪುರಂದರದಾಸರೆನಿಸಿದರು. ಕೃಷ್ಣನ ಅನನ್ಯ ಭಕ್ತರಿವರು. ಭಾರತಾದ್ಯಂತ ಸಂಚರಿಸಿ, ಲಕ್ಷಗಟ್ಟಲೆ ಕೀರ್ತನೆಗಳನ್ನು ರಚಿಸಿದರು. ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ, ರಕ್ತಾಕ್ಷಿ ಸಂವತ್ಸರ, ಪುಷ್ಯ ಬಹುಳ ಅಮಾವಾಸ್ಯೆಯಂದು, ಅಂದರೆ ಕ್ರಿ.ಶ. 1564ರಲ್ಲಿ ಪರಂಧಾಮವನ್ನೈದಿದರು.

ದಾಸರು ಕರ್ನಾಟಕ ಸಂಗೀತಕ್ಕೂ, ಕನ್ನಡ ಸಾಹಿತ್ಯಕ್ಕೂ ಸಲ್ಲಿಸಿರುವ ಸೇವೆ ಅಪಾರ. ಸಂಗೀತ ಪಾಠಕ್ರಮವನ್ನು ಕ್ರಮಪಡಿಸಿದರು. ಅಭ್ಯಾಸಕ್ಕೆ ಅಗತ್ಯವೆನಿಸುವ ಸ್ವರಾವಳಿ, ಅಲಂಕಾರ, ಪಿಳ್ಳಾರಿ ಗೀತೆಗಳನ್ನು ರಚಿಸಿದರು. ಮಾಯಾಮಾಳವಗೌಳ ರಾಗವನ್ನೂ, ಆದಿತಾಳವನ್ನೂ, ನಂತರ ಸುಳಾದಿ ಸಪ್ತತಾಳಗಳನ್ನೂ ಪಠ್ಯಕ್ರಮದ ಮೊದಲ ಪಾಠಗಳಲ್ಲಿ ಅಳವಡಿಸಿದರು. ಕನ್ನಡದಲ್ಲಿ ಕೀರ್ತನೆ, ಉಗಾಭೋಗ, ಸುಳಾದಿ, ವೃತ್ತನಾಮಗಳೇ ಮೊದಲಾದ ವಿವಿಧ ರೀತಿಯ ರಚನೆಗಳನ್ನು ರಚಿಸಿದರು. ಭಾಗವತ, ಉಪನಿಷತ್ತು, ಮಹಾಭಾರತದ ಸಾರವೇ ಹಾಡುಗಳ ರೂಪದಲ್ಲಿ ಮೂಡಿಬಂದವು. ಭಕ್ತಿಯೇ ಸಂಗೀತ ರಚನೆಗಳ ಧ್ಯೇಯವಾಯಿತು. ಹೀಗೆ ಸಂಗೀತ ರಚನೆಗಳ ಮೂಲಕ ಜನಸಾಮಾನ್ಯರಿಗೆ ಗಹನ ತತ್ವಗಳ ಅರಿವನ್ನುಂಟುಮಾಡಲು ಯತ್ನಿಸಿದರು. ಗುರುಗಳಾದ ವ್ಯಾಸರಾಯರು, ಇವರ ರಚನೆಗಳ ಸಂಗ್ರಹವನ್ನು 'ಪುರಂದರೋಪನಿಷತ್' ಎಂಬುದಾಗಿ ಕರೆದು ಗೌರವಿಸಿದರು

## ಪ್ರಶ್ನಪತ್ರಿಕೆ –2

**ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ ;**

1) ಕರ್ನಾಟಕ ಸಂಗೀತದಲ್ಲಿ _______ ಮತ್ತು ________ ಎಂಬ ಎರಡು ಭಾಗಗಳಿವೆ.

2) ಧೃತದಿಂದ ಪ್ರಾರಂಭವಾಗುವ ತಾಳ ____________.

3) ಮೋಹನ ರಾಗಕ್ಕೆ _________ ಧೈವತವು ಬರುತ್ತದೆ.

4) ________ ಸ್ಥಾಯಿಗೆ ಸ್ವರಗಳ ಮೇಲೆ ಚುಕ್ಕೆ ಇಡಲಾಗುತ್ತದೆ.

5) ಆದಿತಾಳಕ್ಕೆ ________ ಅಕ್ಷರಗಳು ಬರುತ್ತದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ;**

1) ಗಾಂಧಾರದಲ್ಲಿ ಮೂರು ವಿಧಗಳು ಯಾವುವು ?

2) ಕೃತಿಯ ಮೂರು ಅಂಗಗಳು ಯಾವುವು ?

3) ಪ್ರಕೃತಿ ಸ್ವರಗಳನ್ನು ಹೆಸರಿಸಿ.

4) ಮುತ್ತುಸ್ವಾಮಿ ದೀಕ್ಷಿತರ ಅಂಕಿತ ಏನು ?

5) ಅಟತಾಳದ ಅಂಗಗಳು ಯಾವುವು ?

**ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;**

1] ನಾಗಸ್ವರಾವಳಿ

2] ಹಂಸಧ್ವನಿ

3] ಮಾಯಾಮಾಳವಗೌಳ

**ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;**

1] ತಾನವರ್ಣ

2] ಜಾತಿ

3] ಸ್ಥಾಯಿ

ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸಗಳನ್ನು ವಿವರಿಸಿ;

ಶ್ರೀ ತ್ಯಾಗರಾಜರ ಜೀವನ ಚರಿತ್ರೆಯನ್ನು ಬರೆದು ಅವರು ಕರ್ನಾಟಕ ಸಂಗೀತಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿ.

## ಉತ್ತರಗಳು

**ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ ;**

1) ಕರ್ನಾಟಕ ಸಂಗೀತದಲ್ಲಿ ರಚಿತ ಮತ್ತು ಮನೋಧರ್ಮ ಎಂಬ ಎರಡು ಭಾಗಗಳಿವೆ.

2) ಧೃತದಿಂದ ಪ್ರಾರಂಭವಾಗುವ ತಾಳ ರೂಪಕ.

3) ಮೋಹನ ರಾಗಕ್ಕೆ ಚತುಶ್ರುತಿ ಧೈವತವು ಬರುತ್ತದೆ.

4) ತಾರಸ್ಥಾಯಿಗೆ ಸ್ವರಗಳ ಮೇಲೆ ಚುಕ್ಕೆ ಇಡಲಾಗುತ್ತದೆ.

5) ಆದಿತಾಳಕ್ಕೆ ಎಂಟು[8] ಅಕ್ಷರಗಳು ಬರುತ್ತದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ;**

1) ಗಾಂಧಾರದಲ್ಲಿ ಮೂರು ವಿಧ; ಅವು

1) ಶುದ್ಧ ಗಾಂಧಾರ 2) ಸಾಧಾರಣ ಗಾಂಧಾರ 3) ಅಂತರ ಗಾಂಧಾರ

2) ಕೃತಿಯಲ್ಲಿನ ಮೂರು ಅಂಗಗಳು ಪಲ್ಲವಿ , ಅನುಪಲ್ಲವಿ ಮತ್ತು ಚರಣ

3) ಪ್ರಕೃತಿ ಸ್ವರಗಳು ಷಡ್ಜ ಮತ್ತು ಪಂಚಮ

4) ಗುರುಗುಹ

5) ಅಟತಾಳದ ಅಂಗಗಳು; 2 ಲಘು ಮತ್ತು 2 ದ್ರುತ

**ಈ ಕೆಳಗಿನ ಯಾವುದಾದರೂ ಎರಡು ರಾಗಗಳಿಗೆ ಲಕ್ಷಣವನ್ನು ಬರೆಯಿರಿ ;**

1] ನಾಗಸ್ವರಾವಳಿ

2] ಹಂಸಧ್ವನಿ

3] ಮಾಯಾಮಾಳವಗೌಳ

**ರಾಗ ಲಕ್ಷಣಗಳು**

ನಾಗಸ್ವರಾವಳಿ :

ಜನ್ಯರಾಗ. 28ನೇ ಮೇಳಕರ್ತ ಹರಿಕಾಂಭೋಜಿ ರಾಗದಲ್ಲಿ ಜನ್ಯ. ಉಪಾಂಗರಾಗ, ಔಡವ ರಾಗ

ಆರೋಹಣ : ಸ ಗ ಮ ಪ ದ ಸ ॥

ಅವರೋಹಣ : ಸ ದ ಪ ಮ ಗ ಸ ॥

ಬರುವ ಸ್ವರಗಳು – ಷಡ್ಜ , ಅಂತರ ಗಾಂಧಾರ, ಶುದ್ಧ ಮಧ್ಯಮ ಪಂಚಮ, ಚತುಶ್ರುತಿ ಧೈವತ

ಪ್ರಸಿದ್ಧ ರಚನೆಗಳು – ಗರುಡ ಗಮನ, ಶ್ರೀ ಶಂಕರ ಗುರುವರಂ ಇತ್ಯಾದಿ.

**ಮಾಯಾಮಾಳವಗೌಳ**

ಆ : ಸ ರಿ ಗ ಮ ಪ ದ ನಿ ಸ

ಅ : ಸ ನಿ ದ ಪ ಮ ಗ ರಿ ಸ

15ನೇ ಮೇಳಕರ್ತ. ಜನಕರಾಗ. ಎಪ್ಪತ್ತೆರಡು ಮೇಳಕರ್ತಗಳ ರಚನೆಯಾದ ಮೇಲೆ ಮಾಯಾಮಾಳವಗೌಳವೆಂದಿದ್ದ ಹೆಸರಿಗೆ ಕಟಪಯಾದಿ ನಿಯಮಕ್ಕನುಸಾರವಾಗಿ 'ಮಾಯಾ' ಎಂಬ ಪದವನ್ನು ಸೇರಿಸಿದ್ದಾರೆ. ಇದು ಮೂರ್ಛನ ಕಾರಕ ಮೇಳ. ಸಂಪೂರ್ಣರಾಗ , ರಾಗಾಂಗರಾಗ.

ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಶುದ್ಧ ರಿಷಭ, ಅಂತರ ಗಾಂಧಾರ, ಶುದ್ಧ ಮಧ್ಯಮ, ಪಂಚಮ, ಶುದ್ಧ ಧೈವತ ಮತ್ತು ಕಾಕಲಿ ನಿಷಾದ. ಸರ್ವಸ್ವರಗಮಕವರಿಕ ರಕತಿ ರಾಗ. ತ್ರಿಸ್ಥಾಯಿ ರಾಗ. ಅನೇಕ ಜನ್ಯ ರಾಗಗಳನ್ನುಳ್ಳ ರಾಗ. ಪ್ರಾರಂಭದಲ್ಲಿ ಕಲಿಯಲು ಸುಲಭವಾಗಿರುವುದರಿಂದ, ಸ್ವರಾವಳಿಗಳು ಈ ರಾಗದಲ್ಲಿವೆ.

**ಪ್ರಸಿದ್ಧ ರಚನೆಗಳು**

| | | | |
|---|---|---|---|
| ಕೃತಿ | ತುಳಸೀದಳ | ರೂಪಕ | ತ್ಯಾಗರಾಜರು |
| ಕೃತಿ | ಶ್ರೀನಾಥಾದಿಗುರುಗುಹೊ | ಆದಿ | ಮುತ್ತುಸ್ವಾಮಿ ದೀಕ್ಷಿತರು |
| ಕೃತಿ | ಮಾಯಾತೀತ | ರೂಪಕ | ತಂಜಾವೂರು ಪೊನ್ನಯ್ಯ |

**ರಾಗ : ಹಂಸಧ್ವನಿ**

ಆ : ಸ ರಿ ಗ ಪ ನಿ ಸ

ಅ : ಸ ನಿ ಪ ಗ ರಿ ಸ

ಜನ್ಯರಾಗ. 29ನೇ ಮೇಳಕರ್ತ ಧೀರಶಂಕರಾಭರಣದಲ್ಲಿ ಜನ್ಯ. ಈ ರಾಗವನ್ನು ಕಂಡುಹಿಡಿದವರು ಮುತ್ತುಸ್ವಾಮಿ ದೀಕ್ಷಿತರ ತಂದೆಯಾದ ರಾಮಸ್ವಾಮಿ ದೀಕ್ಷಿತರು. ಈ ರಾಗಕ್ಕೆ ಬರುವ ಸ್ವರಗಳು ಷಡ್ಜ, ಚತುಶ್ರುತಿ ರಿಷಭ, ಅಂತರ ಗಾಂಧಾರ, ಪಂಚಮ, ಕಾಕಲಿ ನಿಷಾದ. ಇದು ವರ್ಜ್ಯ ರಾಗ. ಮಧ್ಯಮ ಮತ್ತು ಧೈವತ ಸ್ವರಗಳು ವರ್ಜ್ಯ. ಔಡವ ರಾಗ. ಉಪಾಂಗ ರಾಗ. ಸರ್ವಸ್ವರಗಮಕವರಿಕ ರಕ್ತಿರಾಗ. ವೀರರಸ ಪ್ರಧಾನವಾಗಿರುವ ರಾಗ. ಸರ್ವಕಾಲಿಕ ರಾಗ. ತ್ರಿಸ್ಥಾಯಿ ರಾಗ.

**ಪ್ರಸಿದ್ಧ ರಚನೆಗಳು**

| | | | |
|---|---|---|---|
| ತಾನವರ್ಣ | ಜಲಜಾಕ್ಷಿ | ಆದಿ | ಮಾನಂಬುಚಾವಡಿ ವೆಂಕಟಸುಬ್ಬಯ್ಯರ್ |
| ತಾನವರ್ಣ | ಪಗವಾರಿ | ಆದಿ | ಪಟ್ಣಂ ಸುಬ್ರಮಣ್ಯ ಅಯ್ಯರ್ |
| ಕೃತಿ | ವಾತಾಪಿ | ಆದಿ | ಮುತ್ತುಸ್ವಾಮಿದೀಕ್ಷಿತರು |
| ಕೃತಿ | ರಘುನಾಯಕ | ಆದಿ | ತ್ಯಾಗರಾಜರು |
| ಕೃತಿ | ಗಂಗಣಪತೇನಮೊ | ರೂಪಕ | ಮುತ್ತಯ್ಯಭಾಗವತರ್ |

**ಈ ಕೆಳಗಿನ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ ;**

1] ತಾನವರ್ಣ

2] ಜಾತಿ

3] ಸ್ಥಾಯಿ

ತಾನವರ್ಣ : ವಿವಿಧ ಜಾತಿಗಳಲ್ಲಿ ಸಂಯೋಜಿತವಾದ ಸ್ವರಗಳುಳ್ಳ ವಿಶೇಷ ರಚನೆಗೆ ವರ್ಣವೆಂದು ಹೆಸರು. ವರ್ಣಗಳಲ್ಲಿ ರಾಗದ ರಂಜಕ ಮತ್ತು ವಿಶೇಷ ಪ್ರಯೋಗಗಳು ಕಡ್ಡಾಯವಾಗಿ ಬರುತ್ತದೆ. ಸಾಹಿತ್ಯವು ಅಲ್ಪವಾಗಿದ್ದು ಆಕಾರ, ಇಕಾರ ಮುಂತಾದವನ್ನು ಹೆಚ್ಚಾಗಿ ಹೊಂದಿದ್ದು, ವ್ಯಂಜನಾಕ್ಷರಗಳನ್ನು ಕಡಿಮೆಯಾಗಿ ಹೊಂದಿರುತ್ತದೆ.

ಸಾಹಿತ್ಯದ ಶೃಂಗಾರವಾಗಿರಬಹುದು ಅಥವಾ ಭಕ್ತಿ ಪ್ರಧಾನವಾಗಿರಬಹುದು. ಪೂರ್ವಾಂಗದ ಮತ್ತು ಉತ್ತರಾಂಗಗಳು ಪ್ರತ್ಯೇಕವಾಗಿದ್ದು, ಪೂರ್ವಾಂದಲ್ಲಿ ಪಲ್ಲವಿ, ಅನುಪಲ್ಲವಿ, ಚಿಟ್ಟೆಸ್ವರಗಳನ್ನು ನಿರೂಪಿಸಿ, ನಂತರ ಪಲ್ಲವಿಯ ಒಂದು ಅವರ್ತವನ್ನು ಹಾಡಿ/ನುಡಿಸಿ ಪೂರ್ವಾಂಗವನ್ನು ಮುಗಿಸಬೇಕು. ಉತ್ತರಾಂದಲ್ಲಿ ಚರಣವನ್ನು ಒಂದಾವರ್ತಿ ನಿರೂಪಿಸಿ, ಎತ್ತುಗಡೆಸ್ವರಗಳನ್ನು ಹಾಡಿ/ನುಡಿಸಬೇಕು. ಪ್ರತಿಯೊಂದು ಎತ್ತುಗಡೆಸ್ವರವನ್ನು ನಿರೂಪಿಸಿದ ನಂತರ ಚರಣವನ್ನು ಎತ್ತಿಕೊಳ್ಳಬೇಕು. ಹೆಚ್ಚಾಗಿ ತಾನವರ್ಣಗಳು ಆದಿತಾಳ, ಅಟತಾಳ, ಝಂಪೆತಾಳ, ತ್ರಿಪುಟತಾಳಗಳಲ್ಲಿ ರಚಿತವಾಗಿ

**ಜಾತಿ;**

ಜಾತಿಗಳಲ್ಲಿ 5 ವಿಧ; ಅವು

1] ತಿಶ್ರ ಜಾತಿ –3 ಅಕ್ಷರಗಳು

2] ಚತುರಶ್ರ ಜಾತಿ –4 ಅಕ್ಷರಗಳು

3] ಖಂಡ ಜಾತಿ –5 ಅಕ್ಷರಗಳು

4] ಮಿಶ್ರ ಜಾತಿ –7 ಅಕ್ಷರಗಳು

5] ಸಂಕೀರ್ಣ ಜಾತಿ –9 ಅಕ್ಷರಗಳು

ಜಾತಿಗಳು ಲಘುವಿಗೆ ಮಾತ್ರ ಅನ್ವಯವಾಗುತ್ತದೆ.

**ಸ್ಥಾಯಿ :** ಆರೋಹಣ ಮತ್ತು ಅವರೋಹಣಕ್ಕೆ ಸುಲಭವಾಗಿ ಹೊಂದಿ ಬರುವ ಸಪ್ತಸ್ವರ ಸಮೂಹಕ್ಕೆ ಸ್ಥಾಯಿಯೆಂದು ಹೆಸರು. ನಾದವು ಒದೇ ರೀತಿಯಾಗಿರದೆ ತಗ್ಗಾದ ಮತ್ತು ತೀವ್ರವಾದ ಧ್ವನಿಗಳಿಂದ ಕಾಡಿರುತ್ತದೆ.

**ಮಂದ್ರ ಸ್ಥಾಯಿ :** ಆಧಾರ ಷಡ್ಜದಿಂದ ಅವರೋಹಣ ಕ್ರಮದಲ್ಲಿ ಬರುವ, ಅಂದರೆ ನಿಷಾದದಿಂದ ಮೊದಲುಗೊಂಡು ಕೆಳಗಿನ ಷಡ್ಜದವರೆಗೆ ಬರುವ ಸ್ವರಗಳನ್ನು ಮಂದ್ರ ಸ್ಥಾಯಿಯೆನ್ನಲಾಗಿದೆ. ಉದಾ : ನಿ ದ ಪ ಮ ಗ ರಿ ಸ. ಬರವಣಿಗೆಯಲ್ಲಿ ಈ ಸ್ವರಗಳ ಕೆಳಗೆ ಚುಕ್ಕೆಗಳನ್ನು ಇಡಲಾಗುತ್ತದೆ.

ಮಧ್ಯ ಸ್ಥಾಯಿ : ಆಧಾರ ಷಡ್ಜದಿಂದ ಆರೋಹಣ ಕ್ರಮದಲ್ಲಿ ಮುಂದಿನ ನಿಷಾದದವರೆಗು ಬರುವ ಸ್ವರಗಳಿಗೆ ಮಧ್ಯಸ್ಥಾಯಿಯೆಂದು ಹೆಸರು. ಉದಾ : ಸ ರಿ ಗ ಮ ಪ ದ ನಿ. ಬರವಣಿಗೆಯಲ್ಲಿ ಈ ಸ್ವರಗಳ ಕೆಳಗೆ ಚುಕ್ಕೆಗಳನ್ನು ಇಡಲಾಗುವುದಿಲ್ಲ.

ತಾರಸ್ಥಾಯಿ : ಮಧ್ಯಸ್ಥಾಯಿಯ ನಿಷಾದದ ನಂತರ ಬರುವ ಷಡ್ಜದಿಂದ ಮುಂದಕ್ಕೆ ಆರೋಹಣ ಕ್ರಮದಲ್ಲಿ ಬರುವ ಸ್ವರಗಳೇ ತಾರಸ್ಥಾಯಿ ಎನಿಸಿಕೊಳ್ಳುತ್ತದೆ. ಬರವಣಿಗೆಯಲ್ಲಿ ತಾರಸ್ಥಾಯಿಯನ್ನು ತೋರಿಸಲು ಸ್ವರಗಳ ಮೇಲೆ ಚುಕ್ಕೆಗಳನ್ನು ಇಡಲಾಗುತ್ತದೆ ಉದಾ : ಸ ರಿ ಗ ಮ ಪ ದ ನಿ.

ಕರ್ನಾಟಕ ಹಾಗೂ ಹಿಂದೂಸ್ಥಾನಿ ಪದ್ಧತಿಗಳ ಸಾಮ್ಯ ಮತ್ತು ವ್ಯತ್ಯಾಸಗಳು;

ಸಾಮ್ಯ :–

1. ಎರಡು ಪದ್ಧತಿಗಳಿಗೂ ಸಪ್ತಸ್ವರಗಳೆ ಆಧಾರ.
2. ಸ್ವರಗಳ ಸಂಕೇತವೂ ಒಂದೇ ಆಗಿದೆ.
3. ಪ್ರಕೃತಿ ಮತ್ತು ವಿಕೃತಿ ಸ್ವರಗಳ ಪ್ರಭೇದಗಳೂ ಒಂದೇ ಆಗಿದ್ದು, ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರ ಸ್ಥಾನಗಳಿವೆ.
4. ಶ್ರುತಿಗೆ ತಂಬೂರಿಯೇ ಆಧಾರ.
5. ಮೂರು ಸ್ಥಾಯಿಗಳಿವೆ.
6. ಪಿಟೀಲು ಮತ್ತು ಹಾರ್ಮೋನಿಯಮ್ ವಾದ್ಯಗಳು ಪ್ರಧಾನ ಮತ್ತು ಪಕ್ಕವಾದ್ಯಗಳಾಗಿ ಬಳಕೆಯಲ್ಲಿವೆ.
7. ಮನೋಧರ್ಮ ಹಾಗೂ ರಚಿತ ಸಂಗೀತಗಳು, ಗಾಯನ ಮತ್ತು ವಾದನ ಕಛೇರಿಗಳು ಎರಡು ಪದ್ಧತಿಗಳಲ್ಲೂ ಬಳಕೆಯಲ್ಲಿವೆ.

| <u>ಕರ್ನಾಟಕ ಸಂಗೀತ</u> | <u>ಹಿಂದೂಸ್ಥಾನಿ ಸಂಗೀತ</u> |
|---|---|
| 1. ರಾಗ ವಿಭಜನೆಯಲ್ಲಿ ಜನಕ, ಜನ್ಯ ಪದ್ಧತಿಯನ್ನು ಅನುಸರಿಸುತ್ತದೆ. | 1. ರಾಗ ರಾಗಿಣಿ ಪದ್ಧತಿಯಿದ್ದು, ಇತ್ತೀಚೆಗೆ ಥಾಟ್ ಪದ್ಧತಿಯನ್ನು ರಾಗ ವಿಭಜನೆಗೆ ಅಳವಡಿಸಲಾಗಿದೆ. |
| 2. ವಿಕೃತಿ ಸ್ವರಗಳಿಗೆ ಶುದ್ಧ, ಚತುಶ್ರುತಿ, ಷಟ್‌ಶ್ರುತಿ ಎಂಬ ಹೆಸರುಗಳನ್ನು ಕೊಡಲಾಗಿದೆ. ಈ ಪದ್ಧತಿಯಲ್ಲಿ 16 ಸ್ವರಗಳಿವೆ. | 2. ಕೋಮಲ, ತೀವ್ರವೆಂಬ ಹೆಸರುಗಳನ್ನು ವಿಕೃತಿ ಸ್ವರಗಳಿಗೆ ಕೊಡಲಾಗಿದೆ. ಈ ಪದ್ಧತಿಯಲ್ಲಿ ಕೇವಲ 12 ಸ್ವರಗಳಿವ |
| 3. ರಾಗಗಳ ಸ್ವರೂಪದಲ್ಲಿ ಸಾಮ್ಯತೆಯಿದ್ದರೂ, ಹೆಸರುಗಳು ಭಿನ್ನವಾಗಿದೆ. ಕ್ರಮವಾಗಿ ಮೋಹನ, ಹಿಂದೋಳ, ಶಂಕರಾಭರಣ, ಮಾಯಾಮಾಳವಗೌಳ, ಚಕ್ರವಾಕ ಮುಂತಾದವು. | 3. ರಾಗಗಳ ಸ್ವರೂಪದಲ್ಲಿ ಸಾಮ್ಯತೆಯಿದ್ದರೂ, ಹೆಸರುಗಳು ಭಿನ್ನವಾಗಿವೆ. ಇವುಗಳನ್ನು ಕ್ರಮವಾಗಿ ಭೂಪ್, ಮಾಲ್‌ಕೌನ್ಸ್, ಬಿಲಾವಲ್, ಭೈರವ್, ಆಹಿರ್‌ಭೈರವ್ ರಾಗ ಎಂದು ಕರೆಯಲಾಗಿದೆ. |

4. ತಾಳಗಳಲ್ಲಿ ಸುಳಾದಿ ಸಪ್ತ ತಾಳಗಳು, ಛಾಪು ತಾಳಗಳು ಹೆಚ್ಚು ಬಳಕೆಯಲ್ಲಿವೆ.

5. ಗೀತೆ, ಜತಿಸ್ವರ, ಸ್ವರಜತಿ,ವರ್ಣ, ಕೃತಿ, ಕೀರ್ತನೆ, ಪದ, ಜಾವಳಿ, ತಿಲ್ಲಾನಗಳು ಸಂಗೀತ ರಚನೆಗಳಿಗೆ ಕೊಟ್ಟಿರುವ ಹೆಸರುಗಳು.

6. ವಾದ್ಯಗಳಲ್ಲಿ ವೀಣೆ, ಗೋಟುವಾದ್ಯ, ನಾಗಸ್ವರ, ಕೊಳಲು, ಕ್ಲಾರಿಯೋನೇಟ್, ಡೋಲು, ಡೋಲಕ್, ಮೃದಂಗ, ಕಂಜಿರ, ಘಟ, ಮೋರ್ಚಿಂಗ್ ಮುಂತಾದವು.

4. ತಾಳಗಳಲ್ಲಿ ತ್ರಿತಾಲ್, ಚೌತಾಲ್, ಜಪ್, ಸೂಲ್, ಏಕ್, ದಾದ್ರಾ ಇವೇ ಮುಂತಾದ ತಾಳಗಳು ಬಳಕೆಯಲ್ಲಿವೆ.

5. ದ್ರುಪದ್, ಧಮಾರ್, ಖ್ಯಾಲ್, ತರಾನ, ಟಪ್ಪಾ, ಠುಮ್ರಿ, ಘಜಲ್, ಇತ್ತೀಚೆಗೆ ಲಕ್ಷಣ ಗೀತೆಗಳು. ಇವು ಸಂಗೀತ ರಚನೆಗಳಿಗೆ ಕೊಟ್ಟಿರುವ ಹೆಸರುಗಳು.

6. ಸಿತಾರ್, ಸರೋದ್, ಬಿನ್, ದಿಲ್ರೂಬ, ಸಾರಂಗಿ, ಸಂತೂರ್, ಬಾನ್ಸುರಿ, ಷಹನಾಯಿ, ತಬಲ, ಪಕವಾಜ್, ಇವೇ ಮುಂತಾದವು.

## ಶ್ರೀ ತ್ಯಾಗರಾಜರು (ಕ್ರಿ.ಶ. 1767–1847)

ಸಂಗೀತ ತ್ರಿಮೂರ್ತಿಗಳೆನಿಸಿ ಮೆರೆದ ಮೂವರು ವಾಗ್ಗೇಯಕಾರರಲ್ಲಿ ತ್ಯಾಗರಾಜರು ಒಬ್ಬರು. ಶ್ರೀರಾಮನ ಅನನ್ಯ ಭಕ್ತರಾಗಿದ್ದು, ಇಂದಿನ ಕರ್ನಾಟಕ ಸಂಗೀತ ಶೈಲಿಯನ್ನು ರೂಪಿಸಿದ ಪ್ರತಿಭಾವಂತ ವಾಗ್ಗೇಯಯಕಾರರು. ಗಾಯಕರು, ವೈಣಿಕರು, ಸಂಗೀತ ಶಿಕ್ಷಕರು ಹಾಗೂ ಸಾತ್ವಿಕ ಭಕ್ತಿಯ ಪ್ರತಿಪಾದಕರೆನಿಸಿದ ಮಹಾನುಭಾವಿಗಳು.

ತ್ಯಾಗರಾಜರು ರಾಮಬ್ರಹ್ಮ ಮತ್ತು ಸೀತಮ್ಮ ಎಂಬ ದಂಪತಿಗಳಿಗೆ ಕ್ರಿ.ಶ.1767 ಮೇ ತಿಂಗಳ ನಾಲ್ಕರಂದು ತಿರುವಾರೂರಿನಲ್ಲಿ (ತಂಜಾವೂರು ಜಿಲ್ಲೆ) ಜನಿಸಿದರು. ಮುರುಕುನಾಡು ಬ್ರಾಹ್ಮಣರು. ಇವರ ತಂದೆಯ ತಂದೆ ಕವಿ ಗಿರಿರಾಜ. ಷಹಾಜಿ ಮಹಾರಾಜನ ಸಂಸ್ಥಾನದ ಕವಿ. ತಾಯಿಯ ತಂದೆ. ವೀಣಾಕಾಳಹಸ್ತಿ ಅಯ್ಯರ್, ತಂಜಾವೂರಿನ ಆಸ್ಥಾನ ವಿದ್ವಾಂಸರು. ತಾಯಿ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ತಂದೆಯಿಂದ ತೆಲುಗು, ಸಂಸ್ಕೃತ ಭಾಷೆಗಳನ್ನು ಕಲಿತರು. ಸೋಂಠಿ ವೆಂಕಟರಮಣಭಾಗವತರಲ್ಲಿ ಸಂಗೀತ ಶಿಕ್ಷಣ (ಕೇವಲ ಎರಡು ವರ್ಷಗಳು) ಇವುಗಳೊಡನೆ ಗಣಿತ ಜ್ಯೋತಿಷ್ಯ ಮತ್ತು ಮಂತ್ರ ಶಾಸ್ತ್ರಗಳ ಅಭ್ಯಾಸ. ತಮರಮ ಐದನೆಯ ವಯಸ್ಸಿ ನಲ್ಲೇ ರಾಮಾಯಣದ ಶ್ಲೋಕಗಳನ್ನು ಕಂಠಪಾಠ ಮಾಡಿ ಹಾಡುತ್ತಿದ್ದರು. ಕೇವಲ ತಮ್ಮ ಹತ್ತನೆಯ ವಯಸ್ಸಿನಲ್ಲೇ ಸಂಗೀತ ರಚನೆಗಳನ್ನು ರಚಿಸಿದರು. 'ನಮೋ ನಮೋ ರಾಘವಾಯ, ತವ ದಾಸೋಹಂ' ಎಂಬ ಕೀರ್ತನೆಗಳಿಂದ ಇವರ ಜೀವನವು ಆರಂಭವಾಯಿತು.

ತ್ಯಾಗರಾಜರು ಹದಿನೆಂಟನೆಯ ವಯಸ್ಸಿನಲ್ಲಿ ಗೃಹಸ್ಥ ಜೀವನವನ್ನು ಆರಂಭಿಸಿದರು. ಅವರ ಎರಡನೆಯ ಪತ್ನಿಯಲ್ಲಿ ಸೀತಾಲಕ್ಷ್ಮಿ ಎಂಬ ಮಗಳು ಜನಿಸಿದಳು. ರಾಮಕೃಷ್ಣ ಯತೀಂದ್ರರಿಂದ ರಾಮಮಂತ್ರದ ಉಪದೇಶವಾಯಿತು. ತೊಂಬತ್ತಾರು ಕೋಟಿ ರಾಮನಾಮವನ್ನು ಇಪ್ಪತ್ತೊಂದು ವರ್ಷಗಳಲ್ಲಿ ಜಪಿಸಿದರು. ಪ್ರತಿಯೊಂದು ಕೋಟಿಯನ್ನು ಮುಗಿಸಿದಾಗಲೂ ಶ್ರೀ ರಾಮನ ಪ್ರತ್ಯಕ್ಷನಾಗುತ್ತಿದ್ದನಂತೆ! ಹೀಗೆ ಅನೇಕ ಬಾರಿ ಶ್ರೀ ರಾಮನನ್ನು ಪ್ರತ್ಯಕ್ಷ ಮಾಡಿಕೊಂಡ ಯೋಗಿಗಳಿವರು. ತ್ಯಾಗರಾಜರದು ಸರಳ ಜೀವನ. ಪ್ರತಿ ಏಕಾದಶಿಯಂದು ಉಂಛವೃತ್ತಿಯನ್ನು ಮಾಡುತ್ತಿದ್ದರು. ರಾಜಾಶ್ರಯವನ್ನು ತ್ಯಜಿಸಿ ರಾಮನ ಸೇವೆಗೆ ಟೊಂಕ ಕಟ್ಟಿ ನಿಂತರು. ಸಂಗೀತದ ಮೂಲಕ ಮೋಕ್ಷ ಮಾರ್ಗವನ್ನು ಪಡೆಯಬಹುದೆಂದು ತೋರಿಸಿಕೊಟ್ಟ ಮಹಾತ್ಮರು. ತ್ಯಾಗರಾಜರಿಗೆ 'ಸ್ವರಾರ್ಣವ'ವೆಂಬ ಸಂಗೀತ ಶಾಸ್ತ್ರಗ್ರಂಥವನ್ನು ನಾರದ ಮಹರ್ಷಿಗಳೇ ಅನುಗ್ರಹಿಸಿದರೆಂದು ಪ್ರತೀತಿ.

ತ್ಯಾಗರಾಜರು ಪ್ರತಿಭಾವಂತರು. ಉತ್ತಮ ವಾಗ್ಗೇಯಕಾರರು. ಕವಿಯಾಗಿ, ಗೃಹಸ್ಥರಾಗಿ, ತತ್ವಜ್ಞಾನಿಯಾಗಿ, ತ್ಯಾಗಿಯಾಗಿ ತಮ್ಮ ಅಂತ್ಯಕಾಲದಲ್ಲಿ ಸನ್ಯಾಸಿಯಾಗಿ 'ನಾದಬ್ರಹ್ಮಾನಂದ' ರೆನಿಸಿದರು. ನಿಷ್ಕಾಮಕರ್ಮರೆನಿಸಿದ ನಾದಯೋಗಿಗಳಿವರು. ತಮ್ಮ ಭೌತಿಕ ಶರೀರವನ್ನು ಪುಷ್ಯ ಬಹುಳ ಪಂಚಮಿಯಂದು ಅಂದರೆ, 1847 ಜನವರಿ 6 ರಂದು ತಿರುವಯ್ಯಾರಿನಲ್ಲಿ ತ್ಯಜಿಸಿ, ನಾದಬ್ರಹ್ಮನಲ್ಲಿ ಲೀನರಾದರು. ಇಂದಿಗೂ ಈ ಪುಣ್ಯತಿಥಿಯಂದು ಆರಾಧನೆಯನ್ನು ವಿಜೃಂಭಣೆಯಿಂದ ನಡೆಸಲಾಗುತ್ತಿದೆ.

ತ್ಯಾಗರಾಜರು ಕರ್ನಾಟಕ ಸಂಗೀತಕ್ಕೆ ಸಲ್ಲಿಸಿರುವ ಸೇವೆ ಅಪಾರ. ಸಂಗೀತ ರಚನೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ಕೃತಿಯನ್ನು, ಒಂದು ರೂಪಕ್ಕೆ ತಂದು, ಆಕೃತಿಗಳಲ್ಲಿ ಸಂಗತಿಗಳನ್ನು ರೂಢಿಸಿದರು. 72 ಮೇಳಗಳಲ್ಲಿ, ಅನೇಕ ಮೇಳಗಳಿಗೆ ರಾಗಸ್ವರೂಪವನ್ನು ಕೊಟ್ಟು ಕೃತಿಗಳನ್ನು ರಚಿಸಿದರು. ಅನೇಕ ಹೊಸ ರಾಗಗಳನ್ನು ಸೃಷ್ಟಿಸಿ, ಕೃತಿಗಳನ್ನು ರಚಿಸಿದರು. ಆದಿ, ರೂಪಕತಾಳದೊಡನೆ ಛಾಪು ತಾಳಗಳನ್ನು, ದೇಶಾದಿ ಮಧಾದಿ ತಾಳಗಳನ್ನು ರಚನೆಗಳಲ್ಲಿ ಅಳವಡಿಸಿದರು. ದಿವ್ಯನಾಮ ಸಂಕೀರ್ತನೆ, ಉತ್ಸವ ಸಂಪ್ರದಾಯ ಕೀರ್ತನೆ, ಗೇಯನಾಟಕಗಳನ್ನು ರಚಿಸಿದರು. ಇವರು ಅನೇಕ ಕೃತಿ ಗುಚ್ಚಗಳನ್ನೂ ರಚಿಸಿದ್ದಾರೆ. ಅವುಗಳಲ್ಲಿ ಪಂಚರತ್ನ ಕೃತಿಗಳು ಉತ್ತಮವಾದ ರಚನೆ. ಇವರ ರಚನೆಗಳು ತೆಲುಗು ಮತ್ತು ಸಂಸ್ಕೃತಭಾಷೆಗಳಲ್ಲಿವೆ. ಇವರ ಶೈಲಿಯನ್ನು ದ್ರಾಕ್ಷಾಪಾಕಕ್ಕೆ ಹೋಲಿಸಲಾಗಿದೆ. 'ತ್ಯಾಗರಾಜ' ಇವರ ಅಂಕಿತ. ಭಜನ ಸಂಪ್ರದಾಯವನ್ನು ಕ್ರಮಪಡಿಸಿದವರಿವರು. ತಮ್ಮ ಅಪಾರ ಶಿಷ್ಯಪರಂಪರೆಯಿಂದ ಅಳಿಯದ ಸಂಗೀತ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ. ಮಾನಂಬುಚಾವಡಿ ವೆಂಕಟಸುಬ್ಬಯ್ಯರ್, ವೀಣಾಕುಪ್ಪಯ್ಯರ್, ಸುಂದರಭಾಗವತರು, ವಾಲಾಜಪೇಟೆ ವೆಂಕಟರಮಣ ಭಾಗವತರು, ಉಮಯಾಲಪುರಂ ಕೃಷ್ಣಭಾಗವತರು, ಇವರ ಶಿಷ್ಯರಲ್ಲಿ ಪ್ರಮುಖರು.

# ನೀಲಿನಕ್ಷೆ

**ಅಧ್ಯಾಯ – 1**

1. ಕಲೆಯೆಂದರೇನು ?
2. ಸಂಗೀತಕ್ಕೆ ಸಂಬಂಧಪಟ್ಟ ಶಾಸ್ತ್ರಗಳನ್ನು ಹೆಸರಿಸಿ ?
3. ಭೌತಶಾಸ್ತ್ರದಲ್ಲಿ ಕಂಡುಬರುವ ಸಂಗೀತಕ್ಕೆ ಸಂಬಂಧಪಟ್ಟ ಅಂಶಗಳಾವುವು ?
4. ಸಂಗೀತವನ್ನು ಕಲಿಯುವುದರಿಂದ ಆಗುವ ಪ್ರಯೋಜನಗಳಾವುವು ?
5. ಸಂಗೀತವು ಶಾರೀರಿಕ ಆರೋಗ್ಯದ ಮೇಲೆ ಹೇಗೆ ಪರಿಣಾಮಕಾರಿಯಾಗುವುದು ?

**ಅಧ್ಯಾಯ – 2**

1. ಭಾರತೀಯ ಸಂಗೀತ ಪದ್ಧತಿಗಳಾವುವು ? ತಿಳಿಸಿ.
2. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ಸಾಮ್ಯಗಳನ್ನು ವಿವರಿಸಿ ? 5ವಾಕ್ಯಗಳಲ್ಲಿ
3. ಭಾರತೀಯ ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ರಾಗಗಳನ್ನು ಹೆಸರಿಸಿ? (3 ರಾಗಗಳು ಮಾತ್ರ )
4. ಎರಡು ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ರಚನೆಗಳನ್ನು ಹೆಸರಿಸಿ ? (6 ಮಾತ್ರ )
5. ಕರ್ನಾಟಕ ಮತ್ತು ಹಿಂದೂಸ್ಥಾನಿ ಪದ್ಧತಿಗಳಲ್ಲಿ ಕಂಡುಬರುವ ತಾಳಗಳನ್ನು ಹೆಸರಿಸಿ ? ( 6 ತಾಳಗಳು)

**ಅಧ್ಯಾಯ – 3**

1. ಸಂಗೀತವೆಂದರೇನು ? 2. ಶ್ರುತಿಯೆಂದರೇನು ? 3. ಆಧಾರ ಶ್ರುತಿಯೆಂದರೇನು ?
4. ಸ್ವರವೆಂದರೇನು ? 5. ಒಂದು ಸ್ಥಾಯಿಯಲ್ಲಿರುವ ಸ್ವರಗಳನ್ನು ಹೆಸರಿಸಿ ?
6. ಸ್ವರಗಳಲ್ಲಿ ಎಷ್ಟು ವಿಧ ? ಉದಾಹರಣೆಯೊಂದಿಗೆ ತಿಳಿಸಿ.
7. ಪ್ರಕೃತಿ ಸ್ವರವೆಂದರೇನು ? ಉದಹರಿಸಿ. 8. ವಿಕೃತಿ ಸ್ವರವೆಂದರೇನು ? ಉದಹರಿಸಿ.
9. ವಿಕೃತಿ ಸ್ವರಪ್ರಭೇದಗಳನ್ನು ವಿಶದೀಕರಿಸಿ ?
10. ಆರೋಹಣವೆಂದರೇನು ? 11. ಅವರೋಹಣವೆಂದರೇನು ?
12. ಸಂಗೀತ ರಚನೆಯನ್ನು ಕಲಿಯುವ ಮೊದಲು ಆ ರಚನೆಯ ರಾಗವನ್ನು ಹೇಗೆ ಕಲಿಯುವಿರಿ ?
13. ಸ್ಥಾಯಿಯೆಂದರೇನು ? ವಿವಿಧ ಸ್ಥಾಯಿಗಳನ್ನು ಹೆಸರಿಸಿ.
14. ಮಂದ್ರ, ಮದ್ಯ, ತಾರಸ್ಥಾಯಿಗಳನ್ನು ಬರವಣಿಗೆಯಲ್ಲಿ ಹೇಗೆ ಸೂಚಿಸಲಾಗುತ್ತದೆ ?
15. ಸ್ಥಾಯಿಗಳೆಷ್ಟು ? ವಿವರಿಸಿ.

**ಅಧ್ಯಾಯ – 4**

1. ರಾಗವೆಂದರೇನು ? ರಾಗಗಳಲ್ಲಿ ಎಷ್ಟು ವಿಧ ? ಹೆಸರಿಸಿ.
2. ಜನಕರಾಗವೆಂದರೇನು ? ಉದಾಹರಣೆಯೊಂದಿಗೆ ತಿಳಿಸಿ.
3. ಜನ್ಯರಾಗವೆಂದರೇನು ? ಜನ್ಯರಾಗಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?
4. ಉಪಾಂಗ ರಾಗವೆಂದರೇನು ? ಉದಾಹರಣೆಯೊಂದಿಗೆ ತಿಳಿಸಿ.

5. ಭಾಷಾಂಗರಾಗವನ್ನು ಉದಾಹರಣಯೊಂದಿಗ ತಿಳಿಸಿ.

6. ವಕ್ರರಾಗವನ್ನು ಉದಾಹರಣೆಯೊಂದಿಗೆ ವಿಶಧೀಕರಿಸಿ.

7. ಯಾವ ಪ್ರಭೇದಗಳನ್ನು ಆಧರಿಸಿ ಜನ್ಯರಾಗಗಳನ್ನು ವರ್ಗೀಕರಿಸಲಾಗುವುದು ?

8. ಔಡವ, ಷಾಡವ, ಸಂಪೂರ್ಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ ?

9. ಔಡವರಾಗವೆಂದರೇನು ? 10. ಷಾಡವರಾಗವೆಂದರೇನು ?

11. ಸಂಪೂರ್ಣರಾಗವೆಂದರೇನು?

12. ಮೋಹನರಾಗದ ಲಕ್ಷಣವನ್ನು ತಿಳಿಸಿ.

13. ಪ್ರತಿ ಮಧ್ಯಮವು ಬರುವ ರಾಗಗಳನ್ನು ಹೆಸರಿಸಿ.

14. ಔಡವ ರಾಗಗಳನ್ನು ಹೆಸರಿಸಿ.

15. ಷಾಡವರಾಗಕ್ಕೂ ಔಡವರಾಗಕ್ಕೂ ಇರುವ ವ್ಯತ್ಯಾಸವೇನು ?

16. ಶಂಕರಾಭರಣ ರಾಗಕ್ಕೆ ಪ್ರತಿ ಮಧ್ಯಮವನ್ನು ಶುದ್ದ ಮಧ್ಯಮದ ಬದಲು ಉಪಯೋಗಿಸಿದರೆ ಯಾವ ರಾಗವಾಗುವುದು?

17. ಹಂಸಧ್ವನಿ ರಾಗಕ್ಕೆ ನಿಷಾದದ ಬದಲು ಚತುಶ್ರುತಿ ಧೈವತವು ಬಂದರೆ ಯಾವ ರಾಗವಾಗುವುದು ?

18. ಹತ್ತು ಜನ್ಯರಾಗಗಳನ್ನು ಹೆಸರಿಸಿ?

19. ಜನಕರಾಗದಲ್ಲಿ ಶುದ್ಧಮಧ್ಯಮ ಬರುವ ಎರಡು ರಾಗಗಳನ್ನು, ಪ್ರತಿ ಮಧ್ಯಮವು ಬರುವ ಎರಡು ರಾಗಗಳನ್ನು ಹೆಸರಿಸಿ ?

**ಅಧ್ಯಾಯ – 5**

1. ಸಪ್ತತಾಳಗಳ ಹೆಸರು, ಅಂಗಗಳು ಮತ್ತು ಅಕ್ಷರಗಳನ್ನು ತಿಳಿಸಿ.

2. ಪ್ರಥಮ, ದ್ವಿತೀಯ, ತೃತೀಯ ಕಾಲಗಳನ್ನು ವಿವರಿಸಿ.

3. ಗ್ರಹವನ್ನು ವಿವರಿಸಿ. ಸಮಗ್ರಹ ಮತ್ತು ಅನಾಗತ ಗ್ರಹವನ್ನು ಉದಾಹರಣೆಗಳೊಂದಿಗೆ ವಿವರಿಸಿ.

4. ಅನಾಗತ ಗ್ರಹವೆಂದರೇನು ? ಉದಾಹರಣೆಯೊಂದನ್ನು ಕೊಡಿ.

5. ಅಕ್ಷರಕಾಲವನ್ನು ವಿವರಿಸಿ ? ಯಾವ ರಚನೆಯಲ್ಲಿ ಅಕ್ಷರಕಾಲವು ಕಂಡುಬರುತ್ತದೆ.

6. ಜಾತಿಯಲ್ಲಿ ಎಷ್ಟು ವಿಧ ? ಅಕ್ಷರಗಳೊಡನೆ ವಿವರಿಸಿ.

7. **ಇವುಗಳಿಗಿರುವ ಪರಸ್ಪರ ವ್ಯತ್ಯಾಸವನ್ನು ತಿಳಿಸಿ.**

   1. ತ್ರಿಶ್ರಜಾತಿ ಮತ್ತು ಖಂಡಜಾತಿ
   2. ಮಿಶ್ರಜಾತಿ ಮತ್ತು ಸಂಕೀರ್ಣಜಾತಿ
   3. ರೂಪಕತಾಳ ಮತ್ತು ತ್ರಿಪುಟತಾಳ
   4. ಲಘು ಮತ್ತು ದ್ರುತ
   5. ದ್ರುತ ಮತ್ತು ಅನುದ್ರುತ
   6. ಝಂಪೆತಾಳ ಮತ್ತು ತ್ರಿಪುಟತಾಳ
   7. ಧ್ರುವತಾಳ ಮತ್ತು ಮಠ್ಯತಾಳ

8. **ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ.**

1. ಒಂದು ದ್ರುತಕ್ಕೆ ................. ಅಕ್ಷರಗಳು

2. ಲಘುವಿನಲ್ಲಿ .................... ಜಾತಿಗಳಿವೆ.

3. ತಿಶ್ರಜಾತಿಯು .................... ತಾಳದ ಅಲಂಕಾರದಲ್ಲಿರುತ್ತದೆ.

4. ಅಲಂಕಾರಗಳಲ್ಲಿ 14 ಅಕ್ಷರಗಳು ಬರುವ ತಾಳಗಳು ....................

5. ಅಲಂಕಾರಗಳಲ್ಲಿ 10 ಅಕ್ಷರಗಳು ಬರುವ ತಾಳಗಳು ....................

6. ಧ್ರುವತಾಳದಲ್ಲಿ ಒಂದು ಲಘುವನ್ನು ತೆಗೆದರೆ .................... ತಾಳವಾಗುತ್ತದೆ.

7. ರೂಪಕ ತಾಳದಲ್ಲಿ ಒಂದು ದ್ರುತವನ್ನು ತೆಗೆದರೆ .................... ತಾಳವಾಗುತ್ತದೆ.

8. ತಾಳವು ಮನಸ್ಸಿಗೆ .................... ಉಂಟು ಮಾಡುತ್ತದೆ.

9. ಅನುದ್ರುತವು .................... ತಾಳದಲ್ಲಿ ಬರುತ್ತದೆ.

10. ಆದಿತಾಳಕ್ಕೆ .................... ಅಂಗಗಳು.

**ಅಧ್ಯಾಯ – 6**

1. ಕೃತಿಯ ಲಕ್ಷಣವನ್ನು ತಿಳಿಸಿ ? 2. ತಾನವರ್ಣದ ಲಕ್ಷಣವನ್ನು ತಿಳಿಸಿ ?

3. ಸಂಚಾರಿ ಗೀತೆಗೂ ಲಕ್ಷಣ ಗೀತೆಗೂ ಇರುವ ವ್ಯತ್ಯಾಸವೇನು?

4. ಸಭಾಗಾನದ ರಚನೆಗಳನ್ನು ಹೆಸರಿಸಿ?

5. ಅಭ್ಯಾಸಗಾನದ ರಚನೆಗಳಾವುವು ?

6. ಸರಳೆವರಸೆಗೂ ಜಂಟಿವರಸೆಗೂ ಇರುವ ವ್ಯತ್ಯಾಸವೇನು?

7. ಮಂದ್ರಸ್ಥಾಯಿ ವರಸೆಗೂ ತಾರಸ್ಥಾಯಿ ವರಸೆಗೂ ಇರುವ ವ್ಯತ್ಯಾಸವೇನು ?

8. ಪಿಳ್ಳಾರಿ ಗೀತೆಗಳು ಯಾವುವು ? ಅವು ಯಾವ ರಾಗದಲ್ಲಿ ಮತ್ತು ತಾಳಗಳಲ್ಲಿವೆ ?

9. ವಚನದ ಲಕ್ಷಣಗಳೇನು ? 10. ಕೀರ್ತನೆಯ ಲಕ್ಷಣಗಳೇನು ?

**I. ಬಿಟ್ಟಿರುವ ಜಾಗವನ್ನು ಭರ್ತಿಮಾಡಿ.**

a. ಎರಡು ಸಂಗೀತ ಪದ್ಧತಿಗಳಲ್ಲೂ ಶ್ರುತಿಗೆ ................ ವಾದ್ಯವನ್ನು ಬಳಸಲಾಗುತ್ತದೆ.

b, ಕರ್ನಾಟಕ ಸಂಗೀತದ ಮೋಹನ ರಾಗಕ್ಕೆ ಹಿಂದೂಸ್ಥಾನಿ ಪದ್ಧತಿಯಲ್ಲಿ .......... ಎಂದು ಕರೆಯುತ್ತಾರೆ.

c. ಆಧಾರ ಶ್ರುತಿಯನ್ನು ................ ಸ್ವರವೆಂದು ಕರೆಯುತ್ತಾರೆ.

d. ಗಾಂಧಾರವು ................ ಸ್ವರ. e. ವೀಣೆಯು ................ ವಾದ್ಯ

f. ಪಿಟೀಲು ................ ನಿಂದ ನುಡಿಸುವ ವಾದ್ಯ. g. ಸಂಗೀತವು ........... ಕಲೆ.

h. ಷಡ್ಜ ಪಂಚಮಗಳನ್ನು ................. ಸ್ವರಗಳೆನ್ನುತ್ತಾರೆ.

i. ಹಾಡು ಮತ್ತು ತಾಳ ಒಟ್ಟಿಗೆ ಆರಂಭವಾಗುವುದಕ್ಕೆ .............. ಗ್ರಹವೆನ್ನುತ್ತಾರೆ.

**II. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

a. ಮಾನಸಿಕ ಒತ್ತಡಗಳು ................. ದಿಂದ ಪರಿಹಾರವಾಗುತ್ತವೆ. (ವಿಜ್ಞಾನ, ಸಮಾಜಶಾಸ್ತ್ರ, ಸಂಗೀತ)

b. ಸುಷಿರವಾದ್ಯದ ಗುಂಪಿಗೆ ಸೇರುವ ವಾದ್ಯ .......... (ವೀಣೆ, ಮೃದಂಗ, ನಾಗಸ್ವರ)

c. ಆದಿತಾಳ ವರ್ಣಗಳು .......... ಗ್ರಹದಲ್ಲಿ ಪ್ರಾರಂಭವಾಗುತ್ತವೆ. (ಸಮ, ವಿಷಮ, ಅನಾಗತ)

d. ಮುತ್ತುಸ್ವಾಮಿ ದೀಕ್ಷಿತರ ಅಂಕಿತ ......... (ಹರಿಕೇಶ, ಶ್ಯಾಮಕೃಷ್ಣ, ಗುರುಗುಹ)

**e.** ಶ್ರೀ ರಾಗವು .......... ಮೇಳದಲ್ಲಿ ಜನ್ಯ. (15, 22, 29)

**f.** ತ್ಯಾಗರಾಜರ ಕೃತಿಗಳನ್ನು .......... ಪಾಕಕ್ಕೆ ಹೋಲಿಸುತ್ತಾರೆ. (ದ್ರಾಕ್ಷಾ, ಕದಳೀ, ನಾರೀ ಕೇಳ)

## III . ಹೊಂದಿಸಿ ಬರೆಯಿರಿ.

| | |
|---|---|
| 1. ಅಭೋಗಿ | 1. ಪಿಳ್ಳಾರಿಗೀತೆ |
| 2. ಶಂಕರಾಭರಣ | 2. ಅಕ್ಕಮಹಾದೇವಿ ಅಂಕಿತ |
| 3. ಮಲಹರಿ | 3. ಆ : ಸರಿಗಮಪದನಿಸ ಅವ : ಸನಿದಪಮಗರಿಸ |
| 4. ಲಂಬೋದರ ಲಕುಮಿಕರ | 4. ಬಸವಣ್ಣನವರ ಅಂಕಿತ |
| 5. ಚೆನ್ನಮಲ್ಲಿಕಾರ್ಜುನ | 5. ಆ : ಸರಿಗಮದಸ ಅವ : ಸದಮಗರಿಸ |
| 6. ಲಕ್ಷಣಗೀತೆ | 6. ಜನ್ಯರಾಗ |
| 7. ಕನಕದಾಸರು | 7. ಉಪಾಂಗರಾಗ |
| 8. ಮಿಶ್ರಝುಂಪೆ | 8. ರಾಗಲಕ್ಷಣವಿದೆ. |
| 9. ಖಂಡಜಾತಿ ಅಟ | 9. ನೆಲೆಯಾದಿ ಕೇಶವ |
| 10. ತಂಬೂರಿ | 10. ಹತ್ತು ಅಕ್ಷರಗಳು |
| | 11. ಹದಿನಾಲ್ಕು ಅಕ್ಷರಗಳು |
| | 12. ನಾಲ್ಕು ತಂತಿಗಳು |

## IV . ತಪ್ಪುಗಳನ್ನು ತಿದ್ದಿ ಬರೆಯಿರಿ.

**1.** ಖರಹರಪ್ರಿಯ ರಾಗಕ್ಕೆ ಕಾಕಲಿನಿಷಾದವು ಬರುತ್ತದೆ.

**2.** ಚತುರಶ್ರಜಾತಿ ಧ್ರುವತಾಳಕ್ಕೆ 6 ಅಕ್ಷರಗಳು

**3.** ತ್ಯಾಗರಾಜರು ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದಾರೆ.

**4.** ಮೋಹನರಾಗದಲ್ಲಿ ನಿಷಾದವಿದೆ.

**5.** ರೂಪಕತಾಳವು ಲಘುವಿನಿಂದ ಆರಂಭವಾಗುತ್ತದೆ.

**6.** ಗೋಟುವಾದ್ಯವು ತಾಳವಾದ್ಯ.

**7.** ಮುಖವೀಣೆಯು ಶ್ರುತಿವಾದ್ಯ.

**8.** ಚಕ್ರವಾಕವು ಜನ್ಯರಾಗ.

**9.** ಆದಿತಾಳಕ್ಕೆ ಒಂದು ಲಘು ಒಂದು ದ್ರುತ

**10.** ವೀಣೆಯನ್ನು ಕಮಾನಿನಿಂದ ನುಡಿಸುತ್ತಾರೆ

## V . ಇವುಗಳನ್ನು ಕ್ರಮವಾಗಿ ಜೋಡಿಸಿ.

**1.** ಝುಂಪೆತಾಳದ ಅಂಗಗಳನ್ನು ಕ್ರಮವಾಗಿ ಜೋಡಿಸಿ :– ಅನುದ್ರುತ, ಲಘು, ದ್ರುತ.

**2.** ರಿಷಭ, ಷಡ್ಜ, ಗಾಂಧಾರ, ನಿಷಾದ.

**3.** ಷಟ್‌ಶ್ರುತಿ ಧೈವತ, ಶುದ್ಧ ಧೈವತ, ಚತುಶ್ರುತಿ ಧೈವತ.

**4.** ಕೃತಿ, ಗೀತೆ, ಕೀರ್ತನೆ, ವರ್ಣ.

**5.** ಚರಣ, ಪಲ್ಲವಿ, ಅನುಪಲ್ಲವಿ.

## VI. ಈ ಕೆಳಗಿನ ಹೇಳಿಕೆಗಳು ಸರಿಯೋ ತಪ್ಪೋ ಸೂಚಿಸಿ.

1. ಖಂಡಜಾತಿ ಆಟತಾಳಕ್ಕೆ 10 ಅಕ್ಷರಗಳು.
2. ಮಧ್ಯಮದಲ್ಲಿ ಎರಡು ಪ್ರಭೇದಗಳಿವೆ.
3. ಧೀರಶಂಕರಭರಣವು 15ನೇಯ ಮೇಳಕರ್ತ.
4. ತಾನವರ್ಣವು ಸಭಾಗಾನ ರಚನೆ.
5. ಘಟವು ತತವಾಧ್ಯ.

## VII. ಇವುಗಳನ್ನು ಕನಿಷ್ಠ ಪ್ರಮಾಣದಿಂದ ಆರಂಭಿಸಿ ಗರಿಷ್ಠ ಪ್ರಮಾಣದಲ್ಲಿ ಜೋಡಿಸಿ.

1. ರೂಪಕ ತಾಳ, ಝಂಪೆ ತಾಳ, ಏಕ ತಾಳ (ಒಂದಾವರ್ತಕ್ಕೆ ಬರುವ ಅಕ್ಷರಗಳು)
2. ಧ್ರುವ ತಾಳ, ತ್ರಿಪುಟ ತಾಳ, ಮಠ್ಯ ತಾಳ (ಒಂದಾವರ್ತಕ್ಕೆ ಬರುವ ಅಕ್ಷರಗಳು)
3. ಲಘು, ಅನುದ್ರುತ, ದ್ರುತ.
4. ಸಂಪೂರ್ಣ, ಔಡವ, ಷಾಡವ
5. ಚತುರಶ್ರ ಜಾತಿ, ಸಂಕೀರ್ಣ ಜಾತಿ, ಖಂಡ ಜಾತಿ.

## VIII. ಇವುಗಳನ್ನು ಹೆಸರಿಸಿ.

1. ನಿಮ್ಮ ನೆಚ್ಚಿನ ಕರ್ನಾಟಕ ಸಂಗೀತ ವಾಧ್ಯ.
2. ನಿಮ್ಮ ಮೆಚ್ಚಿನ ದೇಶ ಭಕ್ತಿಗೀತೆ.
3. ನಿಮಗೆ ಇಷ್ಟವಾದ ದೇವರ ನಾಮದ ಮೊದಲ ಸಾಲು.
4. ಚಲನಚಿತ್ರದಲ್ಲಿ ಅಳವಡಿಸಿಕೊಂಡಿರುವ ಯಾವುದಾದರೊಂದು ಕೃತಿ.
5. ಚಿತ್ರಗೀತೆಯಲ್ಲಿ ಉಪಯೋಗಿಸಿರುವ ಯಾವುದಾದರೂ ಒಂದು ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗ.

## IX. ಇವುಗಳ ಪರಸ್ಪರ ವ್ಯತ್ಯಾಸವನ್ನು ತಿಳಿಸಿ.

1. ಪ್ರಕೃತಿ ಮತ್ತು ವಿಕೃತಿ ಸ್ವರ.
2. ರಿಷಭ ಮತ್ತು ಗಾಂಧಾರ ಸ್ವರ ಪ್ರಭೇದಗಳು.
3. ಅಭ್ಯಾಸ ಮತ್ತು ಸಭಾಗಾನ ರಚನೆಗಳು.
4. ದ್ರುತ ಮತ್ತು ಅನುದ್ರುತ.
5. ಚತುರಶ್ರ ಜಾತಿ ಮತ್ತು ಖಂಡ ಜಾತಿ.
6. ಸರಳೆವರಸೆ ಮತ್ತು ಜಂಟವರಸೆ.
7. ವೀಣೆ ಮತ್ತು ತಂಬೂರಿ.
8. ಸಂಚಾರಿ ಗೀತೆ ಮತ್ತು ಲಕ್ಷಣ ಗೀತೆ.
9. ಬರವಣಿಗೆಯಲ್ಲಿ ಮಧ್ಯಸ್ಥಾಯಿ ಮತ್ತು ತಾರಸ್ಥಾಯಿ ಸೂಚಿಸುವ ಕ್ರಮ.
10. ಸಂಗೀತ ರಚನೆಗಳನ್ನು ಸ್ವರಪಡಿಸಿ ಬರೆಯುವಾಗ ಬರುವ ಆವರ್ತ ಮತ್ತು ಅಂಗಗಳ ಚಿಹ್ನೆಗಳು.

***